# www.karunaduexams.com

ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ ಗ್ರೇಡ್-1 ಪೇಪರ್-2

Solved Paper

www.karunaduexams.com

1. ಈ ಕೆಳಕಂಡ ವಸತಿ ಯೋಜನೆಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆ/ಯೋಜನೆಗಳು ಯಾವುವು?

I) ಬಸವ ವಸತಿ ಯೋಜನೆ

II) ಡಾ.ಬಿ.ಆರ್.ಅಂಬೇಡ್ಕರ್ ಯೋಜನೆ

III) ಇಂದಿರಾ ಆವಾಸ್ ಯೋಜನೆ

ಈ ಕೆಳಗೆ ಕೊಟ್ಟಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಆರಿಸಿ:

ಅ) II & III ಮಾತ್ರ

ಆ) II ಮಾತ್ರ

ಇ) III ಮಾತ್ರ

ಈ) ಮೇಲಿನ ಎಲ್ಲವೂ

III ಮಾತ್ರ

ಇಂದಿರಾ ಆವಾಸ್ ಯೋಜನೆ ಕೇಂದ್ರ ಪುರಸ್ಕೃತ ಯೋಜನೆಯಾಗಿದೆ(ಈ ಯೋಜನೆಯನ್ನು ಪ್ರಧಾನಮಂತ್ರಿ ಆವಾಸ್ ಯೋಜನೆಯೆಂದಯ ಮರುನಾಮಕರಣ ಮಾಡಲಾಗಿದೆ). ಬಸವ ವಸತಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಯೋಜನೆ ರಾಜ್ಯ ಸರ್ಕಾರದ ಯೋಜನೆಗಳಾಗಿದ್ದು, ಈ ಎರಡು ವಸತಿ ಯೋಜನೆಗಳಡಿ ವಸತಿ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರವೇ ಭರಿಸುತ್ತದೆ. ಗ್ರಾಮೀಣ ಆಶ್ರಯ ಯೋಜನೆಯನ್ನು ಬಸವ ವಸತಿ ಯೋಜನೆಯೆಂದು ಮರುನಾಮಕರಣ ಮಾಡಿ 2010-11 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

2. ಗ್ರಾಮ ಪಂಚಾಯತ್ ಮಟ್ಟದಲ್ಲಿ ನಿರ್ಮಿಸಲಾಗುವ ಜೀವವೈವಿಧ್ಯ ನಿರ್ವಹಣಾ ಸಮಿತಿ (Biodiversity Management Committee)ಯ ಅಧ್ಯಕ್ಷರು ಯಾರು ಆಗಿರುತ್ತಾರೆ?

ಅ) ಗ್ರಾಮ ಪಂಚಾಯತಿ ಅಧ್ಯಕ್ಷರು

ಆ) ಗ್ರಾಮ ಪಂಚಾಯತಿ ಉಪಾಧ್ಯಕ್ಷರು

ಇ) ಪಂಚಾಯತ್ ಅಭಿವೃದ್ಧಿ ಅಧಿಕಾರಿ

ಈ) ಗ್ರಾಮ ಪಂಚಾಯತಿ ನೋಡಲ್ ಅಧಿಕಾರಿ

ಗ್ರಾಮ ಪಂಚಾಯತಿ ಅಧ್ಯಕ್ಷರು

ಜೈವಿಕ ವೈವಿಧ್ಯ ಅಧಿನಿಯಮ 2002 ರ ನಿಯಮ 41 (1), ಹಾಗೂ ಜೈವಿಕ ವೈವಿಧ್ಯ ನಿಯಮಗಳು 2004 ರ ನಿಯಮ 22 ಹಾಗೂ ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005ರ ನಿಯಮ 21ರ ಪ್ರಕಾರ ಪ್ರತಿ ಗ್ರಾಮಪಂಚಾಯತಿಯಲ್ಲಿ ಜೀವವೈವಿಧ್ಯ ಸಮಿತಿಯನ್ನು ರಚಿಸುವುದು ಕಡ್ಡಾಯವಾಗಿದೆ. ಜೀವವೈವಿಧ್ಯ ಸಮಿತಿಯು 7 ಜನರನ್ನು ಒಳಗೊಂಡಿದ್ದು, ಗ್ರಾಮ ಪಂಚಾಯತಿಯ ಅಧ್ಯಕ್ಷರು ಇದರ ಅಧ್ಯಕ್ಷರಾಗಿರುತ್ತಾರೆ. ಪಿಡಿಓ ಈ ಸಮಿತಿಯ

www.karunaduexams.com

ಕಾರ್ಯದರ್ಶಿ ಆಗಿರುತ್ತಾರೆ. ಜೀವವೈವಿಧ್ಯ ಸಮಿತಿಯ ಜವಾಬ್ದಾರಿಗಳನ್ನು ಇಲ್ಲಿ ಓದಬಹುದು: http://www.kbb.kar.nic.in/BMC/GP-BMC-KAN.pdf

3. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ,1993 ರ ಯಾವ ಪ್ರಕರಣದಡಿ ಜೀತಗಾರಿಕೆ ಸಂಬಂಧ ವರದಿ ಸಲ್ಲಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರುತ್ತದೆ?

ಅ) ಪ್ರಕರಣ 61-ಎ

ಆ) ಪ್ರಕರಣ 58-ಎ

ಇ) ಪ್ರಕರಣ 71

ಈ) ಪ್ರಕರಣ 70

ಪ್ರಕರಣ 58-ಎ

ಪ್ರಕರಣ 58-ಎ ಅನ್ವಯ ಜೀತಗಾರಿಕೆ ಸಂಬಂಧ ವರದಿ ಸಲ್ಲಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರುತ್ತದೆ. ಪಂಚಾಯತಿ ಪ್ರದೇಶದಲ್ಲಿ ಜೀತಗಾರಿಕೆ ಪದ್ಧತಿ ಪ್ರವರ್ತನಗೊಂಡ ಯಾವುದೇ ಪ್ರಕರಣದ ಬಗ್ಗೆ ಜಿಲ್ಲಾಧಿಕಾರಿಗಳು ಅಥವಾ ಸಂಬಂಧಿಸಿದ ಇತರೆ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರುತ್ತದೆ.

4. ಗ್ರಾಮ ಪಂಚಾಯತಿಯ ಅಧ್ಯಕ್ಷರು ಈ ಕೆಳಗಿನ ಯಾವ ಸ್ಥಾಯಿ ಸಮಿತಿಗಳಿಗೆ ಸಭಾಪತಿ ಮತ್ತು ಪದನಿಮಿತ್ತ ಸದಸ್ಯರಾಗಿರುತ್ತಾರೆ?

I) ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿ

II) ಸಾಮಾಜಿಕ ನ್ಯಾಯ ಸಮಿತಿ

III) ಸಾಮಾನ್ಯ ಸ್ಥಾಯಿ ಸಮಿತಿ

ಕೆಳಗೆ ಕೊಟ್ಟಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I ಮಾತ್ರ

ಆ) I & III ಮಾತ್ರ

ಇ) I & II ಮಾತ್ರ

ಈ) I, II & III

I ಮಾತ್ರ

ಕ.ಪಂ.ರಾಜ್ ಅಧಿನಿಯಮ 1993 ರ ಪ್ರಕರಣ **61** ರ ಪ್ರಕಾರ ಪ್ರತಿಯೊಂದು ಗ್ರಾಮ ಪಂಚಾಯತಿಯು, ಚುನಾವಣೆ ಮೂಲಕ ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿ, ಸಾಮಾಜಿಕ ನ್ಯಾಯ ಸಮಿತಿ ಮತ್ತು ಸ್ಥಾಯಿ ಸಮಿತಿಯನ್ನು ಕಡ್ಡಾಯವಾಗಿ ರಚಿಸಬೇಕು. ಪ್ರತಿಯೊಂದು ಸಮಿತಿಯು ಸಂದರ್ಭಾನುಸಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸೇರಿದಂತೆ ಕನಿಷ್ಠ ಮೂರು ಮತ್ತು ಐದಕ್ಕಿಂತ ಹೆಚ್ಚಿಲ್ಲದಷ್ಟು ಸದಸ್ಯರನ್ನು ಹೊಂದಿರಬೇಕು. ಗ್ರಾಮ ಪಂಚಾಯತಿ ಅಧ್ಯಕ್ಷರು ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ



www.karunaduexams.com

ಸಮಿತಿಪದನಿಮಿತ್ತ ಸದಸ್ಯ ಮತ್ತು ಅಧ್ಯಕ್ಷರಾಗಿರುತ್ತಾರೆ. ಉಪಾಧ್ಯಕ್ಷನು ಸಾಮಾನ್ಯ ಸ್ಥಾಯಿ ಸಮಿತಿಯ ಸಭಾಪತಿ ಮತ್ತು ಪದನಿಮಿತ್ತ ಸದಸ್ಯರಾಗಿರುತ್ತಾರೆ.

5. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಈ ಕೆಳಕಂಡ ಯಾರಿಗೆ ಕೆಲಸ ನೀಡಲು ಅವಕಾಶವಿದೆ?
   ಅ) ಬಡವರಿಗೆ ಮಾತ್ರ
   ಆ) ಗ್ರಾಮೀಣ ಭಾಗದ ಎಸ್.ಸಿ/ಎಸ್.ಟಿ/ಬಿಪಿಎಲ್ ವರ್ಗದವರಿಗೆ ಮಾತ್ರ
   ಇ) ಗ್ರಾಮೀಣ ಭಾಗದಲ್ಲಿ ವಾಸವಿರುವ ಎಲ್ಲಾ ವಯಸ್ಕರಿಗೂ
   ಈ) ರಾಜ್ಯದಲ್ಲಿ ವಾಸವಿರುವ ಎಲ್ಲಾ ವಯಸ್ಕರಿಗೂ
   ಗ್ರಾಮೀಣ ಭಾಗದಲ್ಲಿ ವಾಸವಿರುವ ಎಲ್ಲಾ ವಯಸ್ಕರಿಗೂ
   ಗ್ರಾಮೀಣ ಭಾಗದಲ್ಲಿ ವಾಸವಿರುವ ಎಲ್ಲಾ ವಯಸ್ಕರಿಗೆ ಅವಕಾಶವಿದೆ. ಗ್ರಾಮೀಣ ಜನರು ಉದ್ಯೋಗಕ್ಕಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟಿ ಅಕುಶಲ ದೈಹಿಕ ಕೆಲಸ ಬಯಸುವ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ 1 ಆರ್ಥಿಕ ವರ್ಷದಲ್ಲಿ (ಏಪ್ರಿಲ್ 1- ಮಾರ್ಚ್ 31) 100 ದಿನಗಳ ಉದ್ಯೋಗಾವಕಾಶವನ್ನು ಕಲ್ಪಿಸಿ ಸ್ಥಳೀಯವಾಗಿ ಆಸ್ತಿಗಳನ್ನು ಸೃಜಿಸುವ ಸಲುವಾಗಿ ಈ ಯೋಜನೆಯನ್ನು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಜಾರಿಗೆ ತಂದಿದೆ.

6. ಸ್ವಚ್ಛ ಭಾರತ ಅಭಿಯಾನದಡಿ ಯಾವ ವರ್ಷದೊಳಗೆ ಭಾರತವನ್ನು ಸಂಪೂರ್ಣ ಬಯಲು ಮುಕ್ತ (Open Defecation Free) ದೇಶವನ್ನಾಗಿ ಮಾಡುವ ಗುರಿ ಹೊಂದಲಾಗಿದೆ?
   ಅ) 2018
   ಆ) 2019
   ಇ) 2020
   ಈ)2022
   2019
   ಸ್ವಚ್ಛ ಭಾರತ ಯೋಜನೆಗೆ ಪ್ರಧಾನಿ ಮೋದಿ ಅವರು ಅಕ್ಟೋಬರ್ 2, 2014 ರಂದು ಚಾಲನೆ ನೀಡಿದರು.ಈ ಹಿಂದೆ ಚಾಲ್ತಿಯಲ್ಲಿದ್ದ ನಿರ್ಮಲ ಗ್ರಾಮ ಪುರಸ್ಕಾರವನ್ನು ಪುನಶ್ಚೇತನಗೊಳಿಸಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ.ಈ ಯೋಜನೆಯಡಿ ದೇಶದ ಶೌಚಾಲಯ ರಹಿತ ಎಲ್ಲಾ ಕುಟುಂಬಗಳಿಗೆ ಶೌಚಾಲಯವನ್ನು ಕಟ್ಟಿಸಿ ಬಯಲು ಮಲ ವಿಸರ್ಜನೆ ಮುಕ್ತವನ್ನಾಗಿ ಮಾಡುವ ಮಹತ್ವದ ಗುರಿ ಹೊಂದಲಾಗಿದೆ.2019ರಲ್ಲಿ ಮಹಾತ್ಮ ಗಾಂಧಿ ರವರ 150ನೇ ಜನ್ಮದಿನಾಚರಣೆ ಆಚರಿಸಲಾಗುವ ಕಾರಣ 2019ಕ್ಕೆ ಗುರಿ ನೀಡಲಾಗಿದೆ.

www.karunaduexams.com

7. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ಬಯಸುವ ವ್ಯಕ್ತಿಯು ಯಾವ ನಮೂನೆಯಲ್ಲಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಬೇಕು?

ಅ) ನಮೂನೆ-1

ಆ) ನಮೂನೆ-3

ಇ) ನಮೂನೆ-6

ಈ) ನಮೂನೆ-8

ನಮೂನೆ-6

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ಬಯಸುವ ವ್ಯಕ್ತಿ/ಕುಟುಂಬವು ನಮೂನೆ-6 ರಲ್ಲಿ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಬೇಕು.ಈ ಅರ್ಜಿ ಸಲ್ಲಿಸಿದ ಕುಟುಂಬಕ್ಕೆ ಗ್ರಾಮ ಪಂಚಾಯಿತಿ **15** (**ಹದಿನೈದು**) ದಿನದೊಳಗೆ ಕೆಲಸವನ್ನು ನೀಡುವುದು ಕಡ್ಡಾಯವಾಗಿರುತ್ತದೆ.

8. ಪ್ರಸ್ತುತ ಗ್ರಾಮ ಪಂಚಾಯತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಮಾಸಿಕ ಗೌರವಧನ ಕ್ರಮವಾಗಿ ಎಷ್ಟಿದೆ?

ಅ) 1000 ಮತ್ತು 750

ಆ) 2000 ಮತ್ತು 1000

ಇ) 1000 ಮತ್ತು 600

ಈ) 1500 ಮತ್ತು 1000

1000 ಮತ್ತು 600

ಪ್ರಸ್ತುತ ಗ್ರಾಮ ಪಂಚಾಯತಿ ಅಧ್ಯಕ್ಷರ ಮಾಸಿಕ ಗೌರವಧನ ರೂ 1000 ಹಾಗೂ ಉಪಾಧ್ಯಕ್ಷರ ಗೌರವಧನ ರೂ 600 ನೀಡಲಾಗುತ್ತಿದೆ. ಗ್ರಾಮ ಪಂಚಾಯತಿ ಸದಸ್ಯರ ಮಾಸಿಕ ಗೌರವಧನ ರೂ 500 ಸರ್ಕಾರ ನಿಗಧಿಪಡಿಸಿದೆ.ತಾಲ್ಲೂಕು ಪಂಚಾಯತಿಯ ಅಧ್ಯಕ್ಷರ ಗೌರವ ಧನ ರೂ 4500, ಉಪಾಧ್ಯಕ್ಷರಿಗೆ ರೂ 3000 ಮತ್ತು ಸದಸ್ಯರಿಗೆ ರೂ 1500 ನಿಗಧಿಪಡಿಸಲಾಗಿದೆ. ಜಿಲ್ಲಾ ಪಂಚಾಯತಿಯಲ್ಲಿ ಅಧ್ಯಕ್ಷರಿಗೆ ರೂ 6000, ಉಪಾಧ್ಯಕ್ಷರಿಗೆ ರೂ 4500 ಮತ್ತು ಸದಸ್ಯರಿಗೆ ರೂ 3000 ನೀಡಲಾಗುತ್ತಿದೆ (ಇತ್ತೀಚಿನ ಮಾಹಿತಿ ಪ್ರಕಾರ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ರೂ 35,000/ ಮಾಸಿಕ ಭತ್ಯೆ ನೀಡಲು ಸರ್ಕಾರ ನಿರ್ಧರಿಸಿದೆ).

9. ಸುರೇಶ್ ಮತ್ತು ನಿರ್ಮಲಾ ದಂಪತಿ ವ್ಯವಸಾಯ ಮಾಡುತ್ತಿದ್ದು, ಈ ದಂಪತಿಗೆ ಮೂರು ಮಕ್ಕಳಿದ್ದಾರೆ. ಮೊದಲನೇ ಮಗ ರವಿ 20 ವರ್ಷ ತುಂಬಿದ್ದು ಕೂಲಿ ಕೆಲಸ ಮಾಡುತ್ತಿದ್ದಾನೆ. ಎರಡನೇ ಮಗ ಚಂದ್ರು ಕಾಲೇಜನಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಮಗಳು ಶೃತಿ 17 ವರ್ಷ ತುಂಬಿದ್ದು ಶಾಲೆ ಬಿಟ್ಟು ಮನೆಯಲ್ಲಿ ಉಳಿದಿದ್ದಾರೆ. ಮಹಾತ್ಮ ಗಾಂಧಿ ರಾಷ್ಟ್ರೀಯ

www.karunaduexams.com

ಉದ್ಯೋಗ ಖಾತ್ರಿ ಯೋಜನೆಯಡಿ ಈ ಮೇಲಿನ ಯಾರು ಉದ್ಯೋಗ ಚೀಟಿ ಪಡೆಯಲು ಅರ್ಹರಾಗಿರುತ್ತಾರೆ.

ಅ) ಸುರೇಶ್ ಮತ್ತು ನಿರ್ಮಲಾ ಮಾತ್ರ

ಆ) ಸುರೇಶ್, ನಿರ್ಮಲಾ ಮತ್ತು ರವಿ

ಇ) ಸುರೇಶ್, ನಿರ್ಮಲಾ, ರವಿ ಮತ್ತು ಶೃತಿ

ಈ) ಮೇಲಿನ ಎಲ್ಲರೂ ಅರ್ಹರು

ಸುರೇಶ್, ನಿರ್ಮಲಾ ಮತ್ತು ರವಿ

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ನಿರ್ವಹಿಸಲು ಬಯಸುವ ಕುಟುಂಬವು ಉದ್ಯೋಗ ಚೀಟಿ ಪಡೆಯುವುದು ಕಡ್ಡಾಯ. ಉದ್ಯೋಗ ಚೀಟಿಯಲ್ಲಿ ನೋಂದಾಯಿಸಿಕೊಳ್ಳುವ ಕುಟುಂಬದ ಸದಸ್ಯರಿಗೆ ಕಡ್ಡಾಯವಾಗಿ **18**ವರ್ಷ ತುಂಬಿರಬೇಕು ಮತ್ತು 60 ವರ್ಷ ಮೇಲ್ಪಟ್ಟವರು ಅನರ್ಹರಾಗಿರುತ್ತಾರೆ. 18 ವರ್ಷ ತುಂಬಿದ್ದು, ವಿದ್ಯಾಭ್ಯಾಸ ಮಾಡುತ್ತಿರುವ ಸದಸ್ಯರು ಉದ್ಯೋಗ ಚೀಟಿಯಲ್ಲಿ ನೋಂದಾಯಿಸಿಕೊಳ್ಳಲು ಅನರ್ಹರಾಗಿರುತ್ತಾರೆ.ಆದ್ದರಿಂದ ಮೇಲಿನ ಪ್ರಶ್ನೆಯಲ್ಲಿ ಸುರೇಶ್ ದಂಪತಿ ಮತ್ತು ಮಗ ರವಿ ಅರ್ಹರಾಗಿದ್ದಾರೆ.ಚಂದ್ರು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವುದರಿಂದ ಮತ್ತು ಶೃತಿ ಶಾಲೆ ಬಿಟ್ಟಿದ್ದರು 18 ವರ್ಷ ಆಗಿರದ ಕಾರಣ ಉದ್ಯೋಗ ಚೀಟಿಯಲ್ಲಿ ನೊಂದಾಯಿಸಿಕೊಳ್ಳಲು ಅನರ್ಹರು.

10. ಪ್ರಸ್ತುತ MGNREGA ಯೋಜನೆಯಡಿ ಕರ್ನಾಟಕದಲ್ಲಿ ಪ್ರತಿ ದಿನಕ್ಕೆ ಪ್ರತಿ ವ್ಯಕ್ತಿಗೆ ನೀಡುತ್ತಿರುವ ಕೂಲಿ ಹಣ ಎಷ್ಟು?

ಅ) ರೂ 220

ಆ) ರೂ 224

ಇ) ರೂ 256

ಈ) ರೂ 243

ರೂ 224

ಕರ್ನಾಟಕದಲ್ಲಿ 2016-17ನೇ ಸಾಲಿನ MGNREGA ಯೋಜನೆಯಡಿ ಕೆಲಸ ಮಾಡುವ ಪ್ರತಿ ವ್ಯಕ್ತಿಗೆ ಪ್ರತಿ ದಿನಕ್ಕೆ ರೂ 224 ಕೂಲಿ ಹಣ ನೀಡಲಾಗುತ್ತಿದೆ.ದೇಶದಲ್ಲಿ ಹರಿಯಾಣ ಅತಿ ಹೆಚ್ಚು ಅಂದರೆ ರೂ 249 ಕೂಲಿ ಹಣ ನೀಡುತ್ತಿರುವ ರಾಜ್ಯವಾಗಿದೆ.ಈ ಯೋಜನೆಯಡಿ ಕೂಲಿ ಹಣವನ್ನು **ಕೇಂದ್ರ ಸರ್ಕಾರ** ಬೇಕೆನಿಸಿದಾಗ ಮಾರ್ಚ್ ತಿಂಗಳಲ್ಲಿ ಪರಿಷ್ಕರಿಸುತ್ತದೆ.

11. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿಯಲ್ಲಿ ಇಲ್ಲದೆ, ಕೇವಲ ಜಿಲ್ಲಾ ಪಂಚಾಯತಿ ಈ ಹಂತದಲ್ಲಿ ಮಾತ್ರ ಕಂಡುಬರುವ ಸ್ಥಾಯಿ ಸಮಿತಿ ಯಾವುದು?

ಅ) ಸಾಮಾಜಿಕ ನ್ಯಾಯ ಸಮಿತಿ

www.karunaduexams.com

ಆ) ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿ

ಇ) ಸಾಮಾನ್ಯ ಸ್ಥಾಯಿ ಸಮಿತಿ

ಈ) ಶಿಕ್ಷಣ ಮತ್ತು ಆರೋಗ್ಯ ಸಮಿತಿ

ಶಿಕ್ಷಣ ಮತ್ತು ಆರೋಗ್ಯ ಸಮಿತಿ

12. ಸರಸ್ವತಿ ಎಂಬ ಫಲಾನುಭವಿಗೆ ಬಸವ ವಸತಿ ಯೋಜನೆಯಡಿ ಮನೆ ಮಂಜೂರಾಗಿದ್ದು, ಪಾಯ ಹಂತದಲ್ಲಿ ಜಿಪಿಎಸ್ ಫೋಟೋವನ್ನು ಗ್ರಾಮ ಪಂಚಾಯತಿ ವತಿಯಿಂದ ತೆಗೆಯಲಾಗಿದೆ. ಸರಸ್ವತಿಯವರಿಗೆ ಈ ಕೆಳಗಿನ ಯಾರು ಹಣವನ್ನು ಬಿಡುಗಡೆಮಾಡುತ್ತಾರೆ?

ಅ) ಪಂಚಾಯತ್ ಅಭಿವೃದ್ಧಿ ಅಧಿಕಾರಿ

ಆ) ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ಇ) ಗ್ರಾಮೀಣಭಿವೃದ್ಧಿ ಇಲಾಖೆ

ಈ) ರಾಜೀವ್ ಗಾಂಧಿ ವಸತಿ ನಿಗಮ

ರಾಜೀವ್ ಗಾಂಧಿ ವಸತಿ ನಿಗಮ

ಗ್ರಾಮ ಪಂಚಾಯತಿಯಲ್ಲಿ ಅನುಷ್ಠಾನಗೊಳಿಸುವ ಎಲ್ಲಾ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಸತಿ ಯೋಜನೆಗಳ ಫಲಾನುಭವಿಗಳಿಗೆ ರಾಜೀವ್ ಗಾಂಧಿ ವಸತಿ ನಿಗಮವು ವಿದ್ಯುನ್ಮಾನ ತಂತ್ರಜ್ಞಾನದ ಬಳಕೆಯಿಂದ ಹಣ ವರ್ಗಾವಣೆ ಪದ್ದತಿ (E-FMS) ಮೂಲಕ ಫಲಾನುಭವಿಗಳ ಖಾತೆಗೆ ನೇರವಾಗಿ ಅನುದಾನ ಬಿಡುಗಡೆ ಮಾಡುತ್ತದೆ. ವಸತಿ ಯೋಜನೆಯಡಿ ನಿರ್ಮಿಸಲಾಗುವ ಮನೆಗಳನ್ನು ಪಾಯ, ಗೋಡೆ, ಛಾವಣಿ ಮತ್ತು ಪೂರ್ಣಗೊಂಡ ನಾಲ್ಕು ಹಂತಗಳಲ್ಲಿ ಗ್ರಾಮ ಪಂಚಾಯತಿ ವತಿಯಿಂದ ಜಿಪಿಎಸ್ ಆಧಾರಿತ ಫೋಟೋ ತೆಗೆದು ನಿಗಮದ ಸಾಫ್ಟ್ ವೇರ್ ಗೆ ಅಳವಡಿಸಬೇಕು. ಈ ಫೋಟೋಗಳನ್ನು ನಿಗಮದಲ್ಲಿ ಪರಿಶೀಲನೆ ಮಾಡಿ ಹಣ ಬಿಡುಗಡೆ ಮಾಡಲಾಗುವುದು.

13. ಗ್ರಾಮ ಪಂಚಾಯತಿಗಳಲ್ಲಿ ಇತ್ತೀಚೆಗೆ ಅನುಷ್ಠಾನಗೊಳಿಸಲಾಗಿರುವ e-FMS ವ್ಯವಸ್ಥೆ ಎಂದರೆ ______?

ಅ) Electronic Fund Management System

ಆ) Electronic Fund Maintenance System

ಇ) Electronic Fund Marginal System

ಈ) Electronic Facility Management System

Electronic Fund Management System

ಗ್ರಾಮ ಪಂಚಾಯತಿಯಲ್ಲಿ ಚೆಕ್ ರಹಿತ ಹಣ ಪಾವತಿ ವ್ಯವಸ್ಥೆ ತರುವ ಸಲುವಾಗಿ e-FMS ಅನ್ನು ಅನುಷ್ಠಾನಗೊಳಿಸಲಾಗಿದೆ. ಸದ್ಯ MGNREGA ಕಾರ್ಮಿಕರ ಕೂಲಿ ಹಣ ಮತ್ತು ಸ್ವಚ್ಛ ಭಾರತ ಅಭಿಯಾನದಡಿ ನಿರ್ಮಿಸಲಾಗುವ ಶೌಚಾಲಯಗಳಿಗೆ ಹಣವನ್ನು ವಿದ್ಯುನ್ಮಾನ



www.karunadueexams.com

ತಂತ್ರಜ್ಞಾನದ ಬಳಕೆಯಿಂದ ಹಣ ವರ್ಗಾವಣೆ ಪದ್ಧತಿ(e-FMS) ವಿಧಾನದಿಂದ ಬಿಡುಗಡೆಮಾಡಲಾಗುತ್ತಿದೆ. ಈ ವಿಧಾನದಲ್ಲಿ ಫಲಾನುಭವಿಗಳ ಖಾತೆ ನೇರವಾಗಿ ಪಿಡಿಓ ಮತ್ತು ಅಧ್ಯಕ್ಷರ ಡಿಜಿಟಲ್ ಸಹಿ ಬಳಸಿ ಹಣ ವರ್ಗಾಯಿಸಲಾಗುವುದು.

14. MGNREGA ಯೋಜನೆಯಡಿ ಪಾರದರ್ಶಕತೆ ತರುವ ಸಲುವಾಗಿ ದೇಶದಲ್ಲೆ ಮೊದಲ ಬಾರಿಗೆ ಕರ್ನಾಟಕ ರಾಜ್ಯ ಅಭಿವೃದ್ಧಿಪಡಿಸಿದ ಮೊಬೈಲ್ ಅಪ್ಲಿಕೇಷನ್ (Mobil App) ಯಾವುದು?

ಅ) M-NREGA

ಆ) K-NREGA

ಇ) N-NREGA

ಈ) S-NREGA

M-NREGA

MGNREGA ಯೋಜನೆಯಡಿ ಕಾಮಗಾರಿಗಳ ಗುಣಮಟ್ಟ, ಪಾರದರ್ಶಕತೆ ಮತ್ತು ಅಕ್ರಮ ತಡೆಯುವ ಸಲುವಾಗಿ M-NREGA ಎಂಬ ಮೊಬೈಲ್ ಆಪ್ ಅನ್ನು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಅಭಿವೃದ್ಧಿಪಡಿಸಿದೆ.ಪ್ರಾಯೋಗಿಕವಾಗಿ ತುಮಕೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಜಾರಿಗೆ ತರಲಾಗಿದೆ.

15. ಗ್ರಾಮ ಪಂಚಾಯತಿ ಅಧ್ಯಕ್ಷರು ತಮ್ಮ ಹುದ್ದೆಗೆ ರಾಜೀನಾಮೆಯನ್ನು ಯಾರಿಗೆ ನೀಡಬೇಕು ಮತ್ತು ಎಷ್ಟು ದಿನದೊಳಗೆ ಅರ್ಜಿ ಹಿಂಪಡೆಯದಿದ್ದರೆ ರಾಜೀನಾಮೆ ಅಂಗೀಕಾರವಾಗುತ್ತದೆ?

ಅ) ಉಪವಿಭಾಗಧಿಕಾರಿ (AC), 15 ದಿನ

ಆ) ಜಿಲ್ಲಾಧಿಕಾರಿ, 15 ದಿನ

ಇ) ಮುಖ್ಯಕಾರ್ಯನಿರ್ವಾಹಣಾಧಿಕಾರಿ, 15 ದಿನ

ಈ) ಕಾರ್ಯನಿರ್ವಾಹಣಾಧಿಕಾರಿ, 15 ದಿನ

ಉಪವಿಭಾಗಧಿಕಾರಿ (AC), 15 ದಿನ

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ-1993ರ ಪ್ರಕರಣ 48 ಪ್ರಕಾರ ಗ್ರಾಮ ಪಂಚಾಯತಿ ಅಧ್ಯಕ್ಷನು, ತನ್ನ ಸಹಿ ಸಹಿತ ಉಪವಿಭಾಗಧಿಕಾರಿ ಅವರಿಗೆ ಬರಹದಲ್ಲಿ ಬರೆದು ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು. ಗ್ರಾಮ ಪಂಚಾಯತಿ ಉಪಾಧ್ಯಕ್ಷನು ತನ್ನ ರಾಜೀನಾಮೆಯನ್ನು ಅಧ್ಯಕ್ಷರಿಗೆ ನೀಡಬೇಕು. ಅಧ್ಯಕ್ಷನು ಇಲ್ಲದಿದ್ದಾಗ ತನ್ನ ಸಹಿತ ಅಸಿಸ್ಟೆಂಟ್ ಕಮೀಷನರ್ ಅವರಿಗೆ ನೀಡಬಹುದು. ರಾಜೀನಾಮೆಗಾಗಿ ನೀಡಿದ ಪತ್ರವನ್ನು ನೀಡಿದ ದಿನಾಂಕದಿಂದ ಹದಿನೈದು ದಿನದೊಳಗೆ (ಕೆಲವು ಪುಸ್ತಕಗಳಲ್ಲಿ ಹತ್ತು ಎಂದಿದೆ ಆದರೆ ಹದಿನೈದು ದಿನ ಸರಿಯಾದ ಉತ್ತರ) ಆತ ಹಿಂಪಡೆಯಬೇಕು ಇಲ್ಲದಿದ್ದರೆ ಅಂಗೀಕರವಾದಂತೆ. ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಜಿಲ್ಲಾಧಿಕಾರಿಗೆ ಮತ್ತು ಜಿಲ್ಲಾ ಪಂಚಾಯತಿ ಅಧ್ಯಕ್ಷರು ಸರ್ಕಾರಕ್ಕೆ ರಾಜೀನಾಮೆ ನೀಡಬೇಕು.

www.karunadueXams.com

16. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993, ರಾಜ್ಯಪಾಲರಿಂದ ಅನುಮೋದನೆಗೊಂಡ ದಿನಾಂಕ_____?

ಅ) ಏಪ್ರಿಲ್ 30, 1993

ಆ) ಏಪ್ರಿಲ್ 24, 1993

ಇ) ಏಪ್ರಿಲ್ 25, 1993

ಈ) ಮಾರ್ಚ್30, 1993

ಏಪ್ರಿಲ್ 30, 1993

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993, ಏಪ್ರಿಲ್ 30, 1993 ರಂದು ರಾಜ್ಯಪಾಲರಿಂದ ಅನುಮೋದನೆಗೊಂಡಿದೆ.

17. ಗ್ರಾಮ ಪಂಚಾಯತಿಗಳಿಗೆ ಹೆಚ್ಚು ಅಧಿಕಾರವನ್ನು ನೀಡುವ ಸಲುವಾಗಿ "ಬೇಲೂರು ಘೋಷಣೆಗೆ" ಯಾವಾಗ ಸಹಿ ಮಾಡಲಾಯಿತು?

ಅ) ಜನವರಿ 23, 2004

ಆ) ಜುಲೈ 14, 2004

ಇ) ಏಪ್ರಿಲ್ 24, 2006

ಈ) ಆಗಸ್ಟ 10, 2008

ಜನವರಿ 23, 2004

ಸ್ಥಳೀಯ ಸರ್ಕಾರದಗಳಾದ ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡುವ ಸಲುವಾಗಿ ಬೇಲೂರು ಘೋಷಣೆಗೆ ಜನವರಿ 23, 2004 ರಂದು ಸಹಿ ಮಾಡಲಾಯಿತು. ರಾಜ್ಯದ ಸಾವಿರಾರು ಗ್ರಾಮ ಪಂಚಾಯತಿ ಸದಸ್ಯರು ಭಾಗವಹಿಸಿದ್ದ ಈ ಸಮ್ಮೇಳನವನ್ನು ಧಾರವಾಡದ ಬೇಲೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರಣ ಇದಕ್ಕೆ ಬೇಲೂರು ಘೋಷಣೆ ಎನ್ನಲಾಗಿದೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಅಂದಿನ ಕುಡಿಯುವ ನೀರು ಸಚಿವ ಕೋಳಿವಾಡ, ಅಂದಿನ ಮುಖ್ಯಮಂತ್ರಿ ಎಸ್.ಎಂ ಕೃಷ್ಣ ರವರು ಈ ಘೋಷಣೆಗೆ ಸಾಕ್ಷಿಯಾಗಿದ್ದರು.[ಪ್ರಶ್ನೆಯನ್ನು ಹೀಗೂ ಕೇಳಬಹುದು ಬೇಲೂರು ಘೋಷಣೆ ಯಾವುದಕ್ಕೆ ಸಂಬಂಧಿಸಿದೆ? ಘೋಷಣೆ ಸಹಿಹಾಕಿದಾಗ ರಾಜ್ಯ ಮುಖ್ಯ ಮಂತ್ರಿಗಳು ಯಾರು? ಯಾವ ಜಿಲ್ಲೆಯಲ್ಲಿ?]

18. ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ 2014, ರಡಿ ಗ್ರಾಮ ಪಂಚಾಯತಿಯಲ್ಲಿ ಎಷ್ಟು ಸೇವೆಗಳನ್ನು ನೀಡಲಾಗುತ್ತಿದೆ?

ಅ) ಒಂಬತ್ತು

ಆ) ಹತ್ತು

www.karunaduexams.com

ಇ) ಹನ್ನೊಂದು

ಈ) ಹದಿನೈದು

ಹನ್ನೊಂದು

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ 2014ನ್ನು ಕರ್ನಾಟಕ ರಾಜ್ಯದಲ್ಲಿನ ನಾಗರಿಕರಿಗೆ ಗೊತ್ತುಮಾಡಿದ ಕಾಲಮಿತಿಯೊಳಗೆ ಸೇವೆಗಳ ಖಾತರಿಗಾಗಿ ವಿತರಿಸಲು ಈ ಅಧಿನಿಯಮವನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಗ್ರಾಮೀಣಭಿವೃದ್ದಿ ಮತ್ತು ಪಂಚಾಯತ್ ರಾಜ್ 11 ಸೇವೆಗಳನ್ನು ಸೇರಿಸಲಾಗಿದೆ.ಸಕಾಲ ಬಗ್ಗೆ ತಿಳಿಯಲು http://www.sakala.kar.nic.in/kanhome.aspx ಕ್ಲಿಕ್ ಮಾಡಿ.

19. ರಾಜ್ಯಸರ್ಕಾರದ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

I) ಈ ಯೋಜನೆಯನ್ನು ಪರಿಶಿಷ್ಟ ಜಾತಿ/ಪಂಗಡ ಮತ್ತು ಇತರೆ ವರ್ಗದ ವಿಧವೆಯರಿಗಾಗಿ ಜಾರಿಗೆ ತಂದಿದೆ

II) ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ನಿರ್ಮಿಸುವ ಮನೆಗಳಿಗೆ ರೂ 1,24,000 ಹಾಗೂ ನಗರಗಳಲ್ಲಿ ನಿರ್ಮಿಸಲಾಗುವ ಮನೆಗಳಿಗೆ ರೂ 1,50,000 ಸಹಾಯಧನ ನೀಡಲಾಗುವುದು.

ಸರಿಯಾದ ಉತ್ತರವನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಆರಿಸಿ:

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆಗಳು ಸರಿ

ಈ) ಎರಡು ಹೇಳಿಕೆಗಳು ತಪ್ಪು

ಎರಡು ಹೇಳಿಕೆ ತಪ್ಪು.

ಮೊದಲನೇ ಹೇಳಿಕೆ ತಪ್ಪು ಏಕೆಂದರೆ ರಾಜ್ಯ ಸರ್ಕಾರವು ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಸತಿ ರಹಿತರಿಗಾಗಿ ಅನುಷ್ಟಾನ ಮಾಡುತ್ತಿದೆ. ಇದರಲ್ಲಿ ಇತರೆ ವರ್ಗದ ವಿಧವೆಯರು ಸೇರಿಲ್ಲ. ಎರಡನೇ ಹೇಳಿಕೆ ಸಹ ತಪ್ಪಾಗಿದೆ ಏಕೆಂದರೆ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ನಿರ್ಮಿಸುವ ಮನೆಗಳಿಗೆ ರೂ 1,50,000 ಹಾಗೂ ನಗರಗಳಲ್ಲಿ ನಿರ್ಮಿಸಲಾಗುವ ಮನೆಗಳಿಗೆ ರೂ 1,80,000 ಸಹಾಯಧನ ನೀಡಲಾಗುವುದು. ಫಲಾನುಭವಿಗಳ ಆಯ್ಕೆಯನ್ನು ಸರ್ಕಾರ 2011 ರಲ್ಲಿ ನಡೆಸಲಾದ ಸಾಮಾಜಿಕ ಆರ್ಥಿಕ ಮತ್ತು ಜಾತಿ ಜನಗಣತಿ ಸಮೀಕ್ಷೆಯಲ್ಲಿ ಕಂಡು ಬಂದ ವಸತಿ ರಹಿತರ ಆಧಾರದ ಮೇಲೆ ಗ್ರಾಮಸಭೆಯಲ್ಲಿ ಆಯ್ಕೆ ಮಾಡಿ ಜಾಗೃತಿ ಸಮಿತಿಗೆ ಸಲ್ಲಿಸಬೇಕು.

www.karunaduexams.com

20. ವೆಂಕಟೇಶಪ್ಪ ಮತ್ತು ಆತನ ಕುಟುಂಬವು MGNREGA ಯೋಜನೆಯಡಿ ಉದ್ಯೋಗ ಚೀಟಿಗೆ ನೊಂದಾಯಿಸಿಕೊಂಡಿದೆ. ಆದರೆ ವೆಂಕಟೇಶಪ್ಪನು ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ ಗ್ರಾಮ ಪಂಚಾಯತಿಗೆ ಸದಸ್ಯನಾಗಿ ಆಯ್ಕೆಯಾಗಿದ್ದಾನೆ, ಆದ್ದರಿಂದ ____?

ಅ) ವೆಂಕಟೇಶಪ್ಪನ ಕುಟುಂಬದ ಉದ್ಯೋಗ ಚೀಟಿಯನ್ನು ರದ್ದುಪಡಿಸಬೇಕು

ಆ) ಕೇವಲ ವೆಂಕಟೇಶಪ್ಪನನ್ನು ಮಾತ್ರ ಉದ್ಯೋಗ ಚೀಟಿಯಿಂದ ತೆಗೆಯಬೇಕು

ಇ) ಉದ್ಯೋಗ ಚೀಟಿಯಲ್ಲಿ ಯಾರನ್ನು ರದ್ದು ಮಾಡಬೇಕಿಲ್ಲ

ಈ) ಉದ್ಯೋಗ ಚೀಟಿಯಲ್ಲಿ ವೆಂಕಟೇಶಪ್ಪನ ಹೆಸರಿರಬಹುದು ಆದರೆ ಕೆಲಸ ಮಾಡುವಾಗಿಲ್ಲ

ಉದ್ಯೋಗ ಚೀಟಿಯಲ್ಲಿ ಯಾರನ್ನು ರದ್ದು ಮಾಡಬೇಕಿಲ್ಲ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡಲು ಇಚ್ಛಿಸುವ ಎಲ್ಲಾ ಕುಟುಂಬಗಳು ಉದ್ಯೋಗ ಚೀಟಿಗೆ ತಮ್ಮ ಕುಟುಂಬದ ವಯಸ್ಕ ಸದಸ್ಯರನ್ನು ನೊಂದಾಯಿಸುವ ಮೂಲಕ ಉದ್ಯೋಗ ಚೀಟಿ ಪಡೆಯಬಹುದಾಗಿದೆ. ಉದ್ಯೋಗ ಚೀಟಿಯನ್ನು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಸೇರಿದಂತೆ ಎಲ್ಲಾ ಚುನಾಯಿತ ಸದಸ್ಯರು ಕೆಲಸ ಮಾಡಲು ಇಚ್ಛಿಸಿದ್ದಲಿ ಪಡೆಯಬಹುದು.ಆದ್ದರಿಂದ ಸದಸ್ಯರಾಗಿ ಆಯ್ಕೆಯಾದ ಮಾತ್ರಕ್ಕೆ ಅವರ ಅಥವಾ ಕುಟುಂಬದ ನೊಂದಾಣಿ ರದ್ದಾಗುವುದಿಲ್ಲ.

21. ಗ್ರಾಮ ಸ್ವರಾಜ್ – ಪಂಚಾಯತ್ ಸಬಲೀಕರಣ ಯೋಜನೆಯನ್ನು ಯಾವ ಸಂಸ್ಥೆಯ ಆರ್ಥಿಕ ಸಹಾಯದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ?

ಅ) ನಬಾರ್ಡ್

ಆ) ವಿಶ್ವಬ್ಯಾಂಕ್

ಇ) ಏಷ್ಯಾ ಅಭಿವೃದ್ಧಿ ಬ್ಯಾಂಕ್

ಈ) ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ

ವಿಶ್ವಬ್ಯಾಂಕ್

ಗ್ರಾಮ ಸ್ವರಾಜ್ – ಪಂಚಾಯತ್ ಸಬಲೀಕರಣ ಯೋಜನೆಯನ್ನು ವಿಶ್ವಬ್ಯಾಂಕ್ ಆರ್ಥಿಕ ನೆರವಿನಿಂದ ರಾಜ್ಯದ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಬರುವ 1341 ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

22. ನೀರು ಸರಬರಾಜು ನಿಯಮಗಳ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ದಿನವೊಂದಕ್ಕೆ ಪ್ರತಿ ವ್ಯಕ್ತಿಗೆ ___ ಲೀಟರ್ ಶುದ್ಧ ಕುಡಿಯುವ ನೀರು ಸರಬರಾಜು ಮಾಡಬೇಕಾಗುತ್ತದೆ?

ಅ) 45

ಆ) 33

ಇ) 55



www.karunaduexams.com

ಈ) 50

55

ನೀರು ಸರಬರಾಜು ನಿಯಮಗಳ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ದಿನವೊಂದಕ್ಕೆ ವ್ಯಕ್ತಿಯೊಬ್ಬರಿಗೆ 55 ಲೀಟರ್ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಬೇಕು.

23. ಗ್ರಾಮ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷರ ಪ್ರಕಾರ್ಯ, ಕರ್ತವ್ಯಗಳ ಬಗ್ಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ,1993 ಈ ಕೆಳಕಂಡ ಯಾವ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ?

ಅ) ಅಧ್ಯಾಯ II

ಆ) ಅಧ್ಯಾಯ III

ಇ) ಅಧ್ಯಾಯ IV

ಈ) ಅಧ್ಯಾಯ V

ಅಧ್ಯಾಯ IV

24. ಭಾರತ ಸಂವಿಧಾನ ಯಾವ ಕಲಂ ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತ್ ಸ್ಥಾಪಿಸಲು ಅವಕಾಶ ಕಲ್ಪಿಸಿದೆ____?

ಅ) ಕಲಂ 39

ಆ) ಕಲಂ 40

ಇ) ಕಲಂ 41

ಈ) ಕಲಂ 42

ಕಲಂ 40

ಭಾರತದ ಸಂವಿಧಾನದ ಭಾಗ IV ರಲ್ಲಿರುವ ರಾಜ್ಯನಿರ್ದೇಶಕ ತತ್ವಗಳಡಿ ಬರುಲ ಕಲಂ 40 ರಲ್ಲಿ ರಾಜ್ಯ ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತಿ ಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಹೇಳಲಾಗಿದೆ.

25. ಸತೀಶ್ MGNREGA ಯೋಜನೆಯಡಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ್ದಾನೆ. ಗ್ರಾಮ ಪಂಚಾಯತಿಯು ಅರ್ಜಿ ಪಡೆದ ಎಷ್ಟು ದಿನದೊಳಗೆ ಕೆಲಸವನ್ನು ನೀಡಬೇಕು?

ಅ) ಏಳು ದಿನ

ಆ) ಹತ್ತು ದಿನ

ಇ) ಹದಿನೈದು ದಿನ

ಈ) ಇಪ್ಪತ್ತು ದಿನ

ಹದಿನೈದು ದಿನ

www.karunaduexams.com

ಯಾವುದೇ ಒಬ್ಬ ಅರ್ಜಿದಾರ MGNREGA ಯೋಜನೆಯಡಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ ಹದಿನೈದು ದಿನಗಳ ಅವಧಿಯ ಒಳಗಾಗಿ ಉದ್ಯೋಗವನ್ನು ಒದಗಿಸಬೇಕು.ಒಂದು ವೇಳೆ ಗ್ರಾಮ ಪಂಚಾಯತಿಯು ಉದ್ಯೋಗವನ್ನು ನೀಡದೆ ಹೋದರೆ ಅರ್ಜಿದಾರ ದಿನಂಪ್ರತಿ ನಿರುದ್ಯೋಗ ಭತ್ಯೆಪಡೆಯಲು ಅರ್ಹರಾಗಿರುತ್ತಾರೆ.MGNREGA ಕಾಯಿದೆ ಪ್ರಕರಣ 7ರ ಅನ್ವಯ ನಿರುದ್ಯೋಗವನ್ನು ಭತ್ಯೆಯನ್ನು ನೀಡಲಾಗುತ್ತದೆ.

26. ಪಂಚಾಯತ್ ವ್ಯವಸ್ಥೆಗೆ ಸಂಬಂಧಿಸಿದ ಸಂವಿಧಾನದ 11 ನೇ ಅಧಿಸೂಚನೆಯು ಎಷ್ಟು ಅಂಶಗಳನ್ನು ಒಳಗೊಂಡಿದೆ?

ಅ) 21

ಆ) 25

ಇ) 29

ಈ) 30

29

ಸಂವಿಧಾನದ 11 ನೇ ಅಧಿಸೂಚನೆಯು 29 ಅಂಶಗಳನ್ನು ಒಳಗೊಂಡಿದೆ.

27. MGNREGA ಕಾಯಿದೆಯಂತೆ ಒಟ್ಟು ಯೋಜನಾ ವೆಚ್ಚದಲ್ಲಿ ಕನಿಷ್ಟ ಶೇ_____ ಹಣವನ್ನು ಕೆಲಸಗಾರರ ಮಾನವ ದಿನಗಳಿಗೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ?

ಅ) ಶೇ 40%

ಆ) ಶೇ 50%

ಇ) ಶೇ 60%

ಈ) ಶೇ 70%

ಶೇ 50%

MGNREGA ಕಾಯಿದೆಯಂತೆ ಒಟ್ಟು ಯೋಜನಾ ವೆಚ್ಚದಲ್ಲಿ ಕನಿಷ್ಟ ಶೇ 50% ಹಣವನ್ನು ಕೆಲಸಗಾರರ ಮಾನವ ದಿನಗಳಿಗೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

28. ಸಂವಿಧಾನದ 73ನೇ ತಿದ್ದುಪಡಿಯ 243(ಡಿ) ಅನುಚ್ಛೇದ ಪ್ರಕಾರ ಈ ಕೆಳಗಿನ ಯಾರಿಗೆ ಮೀಸಲಾತಿ ಲಭಿಸುತ್ತದೆ?

ಅ) ಪರಿಶಿಷ್ಟ ಜಾತಿ

ಆ) ಪರಿಶಿಷ್ಟ ಬುಡಕಟ್ಟುಗಳು

ಇ) ಹಿಂದುಳಿದ ವರ್ಗಗಳು

ಈ) ಅ ಮತ್ತು ಆ

ಅ ಮತ್ತು ಆ

www.karunaduexams.com

ಸಂವಿಧಾನದ 73ನೇ ತಿದ್ದುಪಡಿಯ 243 (ಡಿ) ಅನುಚ್ಛೇದ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲಾತಿ ಕಲ್ಪಿಸುವ ಅವಕಾಶವನ್ನು ನೀಡಿದೆ.ಅನುಚ್ಛೇದದಡಿ 1/3 ರಷ್ಟು ಕಡಿಮೆ ಇಲ್ಲದಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲಿಡಬೇಕು.

29. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ-1993ರ ಯಾವ ಅನುಚ್ಛೇದವೂ ನೀರಿನ ಸರಬರಾಜಿಗೆ ಸಂಬಂಧಿಸಿದ ಉಪನಿಯಮಗಳನ್ನು ರೂಪಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿಗೆ ನೀಡಿದೆ?

ಅ) 68ನೇ ಅನುಚ್ಛೇದ

ಆ) 70ನೇ ಅನುಚ್ಛೇದ

ಇ) 78ನೇ ಅನುಚ್ಛೇದ

ಈ) 80ನೇ ಅನುಚ್ಛೇದ

78ನೇ ಅನುಚ್ಛೇದ

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ-1993ರ 78ನೇ ಅನುಚ್ಛೇದ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು ಗ್ರಾಮ ಪಂಚಾಯತಿಯು ತನ್ನ ಪರಿಮಿತಿಗಳೊಳಗೆ ಅಥವಾ ಅದರ ಹೊರಗೆ ಆಗಲಿ ನೀರು ಸರವರಾಜಿನ ಮೂಲಗಳು ಮತ್ತು ಸಾಧನಗಳು ಮತ್ತು ನೀರಿನ ವಿತರಣೆ ಸಾಧನ ಸಾಮಾಗ್ರಿಗಳನ್ನು ಸಂರಕ್ಷಿಸಲು, ಪೋಲಾಗುವುದನ್ನು ತಡೆಯುವುದಕ್ಕೆ ಉಪವಿಧಿಗಳನ್ನು ರಚಿಸಬಹುದು.

30. ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಪಂಚಾಯತಿಯ ಚುನಾವಣೆಗಳು _____?

ಅ) ಪಕ್ಷದ ಆಧಾರದ ಮೇಲೆ ನಡೆಯುತ್ತವೆ

ಆ) ಪಕ್ಷದ ಚಿಹ್ನೆಗಳ ಅನ್ವಯ ನಡೆಯುತ್ತವೆ

ಇ) ಪಕ್ಷರಹಿತ ಆಧಾರದ ಮೇಲೆ ನಡೆಯುತ್ತವೆ

ಈ) ನಾಮನಿರ್ದೇಶನದ ಪ್ರಕಾರ ನಡೆಸಲಾಗುತ್ತದೆ

ಪಕ್ಷರಹಿತ ಆಧಾರದ ಮೇಲೆ ನಡೆಯುತ್ತವೆ

ರಾಜ್ಯದ ಗ್ರಾಮ ಪಂಚಾಯತಿಯಲ್ಲಿ ಪಂಚಾಯತಿ ಚುನಾವಣೆಗಳು ಪಕ್ಷರಹಿತ ಆಧಾರದ ಮೇಲೆ ನಡೆಯುತ್ತವೆ.

31. ಅಬ್ದುಲ್ ನಜೀರ್ ಸಾಬ್ ಸ್ಟೇಟ್ ಇನ್ ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್ಮೆಂಟ್ ಎಲ್ಲಿದೆ?

ಅ) ಮೈಸೂರು

ಆ) ಚಿತ್ರದುರ್ಗ

ಇ) ಬೆಂಗಳೂರು

www.karunaduexams.com

ಈ) ಬಳ್ಳಾರಿ

ಅಬ್ದುಲ್ ನಜೀರ್ ಸಾಬ್ ಸ್ಟೇಟ್ ಇನ್ ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್ಮೆಂಟ್ ಮೈಸೂರಿನಲ್ಲಿದೆ.ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾಯಿತಿ ಸದಸ್ಯರಿಗೆ ತರಭೇತಿ ನೀಡುವುದು ಈ ಸಂಸ್ಥೆಯ ಮುಖ್ಯ ಕಾರ್ಯವಾಗಿದೆ.

32. ಗ್ರಾಮ ಪಂಚಾಯತಿಯ ಆದಾಯ ಮತ್ತು ವೆಚ್ಚದ ಬಜೆಟ್ ಅನ್ನು ಈ ಕೆಳಕಂಡ ಯಾವ ಅವಧಿಯಲ್ಲಿ ನಡೆಯುವ ಸಭೆಯಲ್ಲಿ ಮಂಡಿಸಬೇಕು?

ಅ) ಜನವರಿ ಮೊದಲನೇ ದಿನ ಮತ್ತು ಫೆಬ್ರುವರಿ ಹತ್ತನೇ ದಿನ

ಆ) ಫೆಬ್ರುವರಿ ಮೊದಲನೇ ದಿನ ಮತ್ತು ಮಾರ್ಚ್ ಹತ್ತನೇ ದಿನ

ಇ) ಮಾರ್ಚ್ ಮೊದಲನೇ ದಿನ ಮತ್ತು ಏಪ್ರಿಲ್ ಹತ್ತನೇ ದಿನ

ಈ) ಮೇಲಿನ ಯಾವುದು ಅಲ್ಲ

ಫೆಬ್ರುವರಿ ಮೊದಲನೇ ದಿನ ಮತ್ತು ಮಾರ್ಚ್ ಹತ್ತನೇ ದಿನ

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ-1993ರ 241 ಅನುಚ್ಛೇದದ ಪ್ರಕಾರ ಗ್ರಾಮ ಪಂಚಾಯತಿಯ ಆದಾಯ ಮತ್ತು ವೆಚ್ಚದ ಬಜೆಟ್ ಅನ್ನು ಫೆಬ್ರುವರಿ ಮೊದಲನೇ ದಿನ ಮತ್ತು ಮಾರ್ಚ್ ಹತ್ತನೇ ದಿನದ ನಡುವೆ ನಡೆಯುವ ಸಭೆಯಲ್ಲಿ ಮಂಡಿಸತಕ್ಕದ್ದು.

33. ಪ್ರಸ್ತುತ ಕರ್ನಾಟಕದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅಧಿಕಾರವದಿ ಎಷ್ಟು ವರ್ಷ?

ಅ) ಎರಡು ವರ್ಷ

ಆ) ಮೂರು ವರ್ಷ

ಇ) ಎರಡುವರೆ ವರ್ಷ

ಈ) ಐದು ವರ್ಷ

ಐದು ವರ್ಷ

ಪ್ರಸ್ತುತ ಕರ್ನಾಟಕದಲ್ಲಿ ಗ್ರಾಮ ಪಂಚಾಯತ್, ತಾಲ್ಲೂಕ್ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಕಾಲಾವಧಿ ಐದು ವರ್ಷ.

34. ರಾಜ್ಯದ ಯಾವುದೇ ಗ್ರಾಮ ಪಂಚಾಯತಿಯ ಸಿಬ್ಬಂದಿ ವಿವರ, ತೆರಿಗೆ ಬೇಡಿಕೆ ವಸೂಲಾತಿ ಮತ್ತು ಸಭೆ ಮತ್ತಿತ್ತರ ವಿವರಗಳನ್ನು ಈ ತಂತ್ರಾಂಶದಲ್ಲಿ ಅಳವಡಿಸಬೇಕು_____?

ಅ) ಪಂಚಮಿತ್ರ

ಆ) ವರ್ಕ್ ಸಾಫ್ಟ್

ಇ) ಪಂಚತಂತ್ರ

ಈ) ಎಂಡ್2ಎಂಡ್

ಪಂಚತಂತ್ರ

ಪಂಚತಂತ್ರ ತಂತ್ರಾಂಶದಲ್ಲಿ ಪ್ರತಿ ಗ್ರಾಮ ಪಂಚಾಯತಿಯು ತನ್ನ ಸಿಬ್ಬಂದಿ ವಿವರ, ಪಂಚಾಯತಿ ಸಂಬಂಧಪಟ್ಟ ತೆರಿಗೆ ಬೇಡಿಕೆ ಮತ್ತು ವಸೂಲಾತಿ, ಗ್ರಾಮ ಪಂಚಾಯತಿಯಲ್ಲಿ ನಡೆಸಲಾಗುವ ವಾರ್ಡ್ ಸಭೆ, ಗ್ರಾಮ ಸಭೆ ಹಾಗೂ ಸಾಮಾನ್ಯ ಸಭೆ ವಿವರ, ಗ್ರಾಪ ಪಂಚಾಯತಿಗಳ ಸ್ಥಿರಾಸ್ಥಿ ಸೇರಿದಂತೆ ಹಲವು ಮಾಹಿತಿಗಳನ್ನು ಪಂಚತಂತ್ರದಲ್ಲಿ ಅಳವಡಿಸಬೇಕು. ಈ ಮಾಹಿತಿಯನ್ನು ಯಾರು ಬೇಕಾದರು ತಾವು ಕುಳಿತಲ್ಲಿಯೇ ನೋಡಬಹುದಾಗಿದೆ. ಪಂಚತಂತ್ರದಲ್ಲಿ ಲಭಿಸುವ ಮಾಹಿತಿ ನೋಡಲು ಈ ಲಿಂಕ್ ಬಳಸಿ ನೋಡಿ http://panchatantra.kar.nic.in/stat/

35. ಗ್ರಾಮ ಪಂಚಾಯತಿ ರಚನೆಯಾದ ಮೊದಲ ಸಭೆಯನ್ನು ಯಾರು ಕರೆಯತಕ್ಕದ್ದು?

ಅ) ಗ್ರಾಮ ಪಂಚಾಯತಿ ಅಧ್ಯಕ್ಷರು

ಆ) ಕಾರ್ಯನಿರ್ವಹಣಾಧಿಕಾರಿ

ಇ) ಜಿಲ್ಲಾಧಿಕಾರಿ ಗೊತ್ತುಪಡಿಸಿದ ಅಧಿಕಾರಿ

ಈ) ಅಸಿಸ್ಟೆಂಟ್ ಕಮೀಷನರ್

ಜಿಲ್ಲಾಧಿಕಾರಿ ಗೊತ್ತುಪಡಿಸಿದ ಅಧಿಕಾರಿ

ಗ್ರಾಮ ಪಂಚಾಯತಿ ರಚನೆಯಾದ ಮೇಲೆ ಮೊದಲ ಸಭೆಯನ್ನು ಜಿಲ್ಲಾಧಿಕಾರಿ ಗೊತ್ತುಪಡಿಸಿದ ಅಧಿಕಾರಿ ಕರೆಯತಕ್ಕದ್ದು.ತಾಲ್ಲೂಕು ಪಂಚಾಯತಿ ಮೊದಲ ಸಭೆಯನ್ನು ಅಸಿಸ್ಟೆಂಟ್ ಕಮೀಷನರ್, ಜಿಲ್ಲಾ ಪಂಚಾಯತಿ ಮೊದಲ ಸಭೆಯನ್ನು ಡಿವಿಜನಲ್ ಕಮೀಷನರ್ (ವಿಭಾಗಾಧಿಕಾರಿ) ಕರೆಯಬೇಕು. ಗ್ರಾಮ ಪಂಚಾಯತಿ ರಚನೆ ಅಂದರೆ ಪ್ರತಿ ಚುನಾವಣೆ ಆಗಿ ಸದಸ್ಯರು ಆಯ್ಕೆಯಾದ ಮೇಲೆ ಎಂದರ್ಥ. (ಪ್ರಶ್ನೆ: ಎಷ್ಟು ದಿನದೊಳಗೆ ಮೊದಲ ಸಭೆ ಕರೆಯಬೇಕು? ಚುನಾಯಿತ ಸದಸ್ಯರ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದ ದಿನದಿಂದ ಮೂವತ್ತು ದಿನದೊಳಗಾಗಿ ಕರೆಯಬೇಕು). (ನಂತರದ ಸಭೆಯನ್ನು ಆಯಾ ಪಂಚಾಯತಿಯ ಅಧ್ಯಕ್ಷರು ಕರೆಯುತ್ತಾರೆ. ಸಭೆಯನ್ನು ಕಡ್ಡಾಯವಾಗಿ ಕೇಂದ್ರ ಕಚೇರಿ ಸ್ಥಳದಲ್ಲೇ ಕರೆಯಬೇಕು).

36. ಗ್ರಾಮ ಪಂಚಾಯತಿಯು ಕನಿಷ್ಠ ಪಕ್ಷ ಎಷ್ಟು ತಿಂಗಳಿಗೊಮ್ಮೆ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯನ್ನು ಕರೆಯಬೇಕು?

ಅ) ಎರಡು ತಿಂಗಳು

ಆ) ಮೂರು ತಿಂಗಳು

ಇ) ಒಂದು ತಿಂಗಳು

ಈ) ಹದಿನೈದು ದಿನಕ್ಕೊಮ್ಮೆ

ಒಂದು ತಿಂಗಳು

www.karunaduexams.com

ಗ್ರಾಮ ಪಂಚಾಯತಿಯು ಕಾರ್ಯಕಲಾಪವನ್ನು ನಡೆಸುವುದಕ್ಕಾಗಿ ಕಚೇರಿಯಲ್ಲಿ ಕನಿಷ್ಠಪಕ್ಷ ಒಂದು ತಿಂಗಳಿಗೊಮ್ಮೆ ಮತ್ತು ಅಧ್ಯಕ್ಷನು ನಿರ್ಧರಿಸಬಹುದಾದ ಕಾಲದಲ್ಲಿ ಸಭೆಯನ್ನು ಕರೆಯಬೇಕು.ಗ್ರಾಮ ಪಂಚಾಯತಿಯಲ್ಲಿ ಮೂರು ತರದ ಸಭೆಗಳನ್ನು ನಡೆಸಬಹುದಾಗಿದೆ ಅವುಗಳೆಂದರೆ ಸಾಮಾನ್ಯ ಸಭೆ, ವಿಶೇಷ ಸಭೆ ಮತ್ತು ತುರ್ತು ಸಭೆ.[ಸಾಮಾನ್ಯ ಸಭೆ:ಸಾಮಾನ್ಯ ಸಭೆಯನ್ನು ಕನಿಷ್ಠ ಒಂದು ತಿಂಗಳಿಗೊಮ್ಮೆ ಕರೆಯಬೇಕು. ಸಾಮಾನ್ಯ ಸಭೆ ಕರೆದಿರುವ ಬಗ್ಗೆ ಸದಸ್ಯರಿಗೆ ಏಳು ಪೂರ್ಣ ದಿವಸಗಳ ನೋಟಿಸನ್ನು ನೀಡಬೇಕು. ಸಾಮಾನ್ಯ ಸಭೆಗೆ ಕೋರಂ ಒಟ್ಟು ಸಂಖ್ಯೆಯ ಅರ್ಧದಷ್ಟು ಇರಬೇಕು ಉದಾ 18 ಜನ ಸದಸ್ಯರಿದ್ದರೆ (ಅಧ್ಯಕ್ಷನು ಸೇರಿ) 9 ಜನ ಹಾಜರಿದ್ದರೆ ಮಾತ್ರ ಸಭೆ ನಡೆಸಬೇಕು, ಒಂದು ವೇಳೆ ಕೋರಂ ಇಲ್ಲದಿದ್ದಲ್ಲಿ ಮೂವತ್ತು ನಿಮಿಷ ಕಾಯಬೇಕು ಆಗಲೂ ಇಲ್ಲದಿದ್ದಲ್ಲಿ ಮಾರನೇ ದಿನದಂದು ಅಥವಾ ತರುವಾಯ ದಿನದಂದು ನಿಗಧಿಪಡಿಸಬೇಕು]. [ವಿಶೇಷ ಸಭೆ: ಅಧ್ಯಕ್ಷನು ತಾನು ಸೂಕ್ತವೆಂದಾಗ ಮತ್ತು ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗಕ್ಕೆ ಕಡಿಮೆ ಇಲ್ಲದಷ್ಟು ಸದಸ್ಯರು ಬರಹದಲ್ಲಿ ಕೋರಿದಾಗ ಅಂತಹ ಕೋರಿಕೆ ತಲುಪಿದ ಹದಿನೈದು ದಿನದೊಳಗೆ ವಿಶೇಷ ಸಭೆಯನ್ನು ಕರೆಯತಕ್ಕದ್ದು. ವಿಶೇಷ ಸಭೆಯ ಬಗ್ಗೆ ಮೂರು ದಿವಸಗಳ ಪೂರ್ಣ ನೋಟಿಸ್ ನೀಡಬೇಕು]. [ತುರ್ತು ಸಭೆಯನ್ನು 24 ಗಂಟೆಯೊಳಗೆ ತುರ್ತು ಪರಿಸ್ಥಿಯಲ್ಲಿ ಅಂದರೆ ಪ್ರವಾಹ ಇತ್ಯಾದಿ ಸಂದರ್ಭಗಳಲ್ಲಿ ಕರೆಯತಕ್ಕದ್ದು]. [ಪ್ರಶ್ನೆ: ಸಭೆಯಲ್ಲಿ ಚರ್ಚಿಸಬೇಕಾದ ವಿಯಷ (ಅಜೆಂಡಾ)ವನ್ನು ಸೂಚಿಸುವವರು ಯಾರು? ಅಧ್ಯಕ್ಷರು. ಒಮ್ಮೆ ಸಭೆಯಲ್ಲಿ ಕೈಗೊಳ್ಳಲಾದ ತೀರ್ಮಾನವನ್ನು ಎಷ್ಟು ತಿಂಗಳ ಕಾಲ ಬದಲಾಯಿಸುವಂತಿಲ್ಲ? ಆರು ತಿಂಗಳು].

37. MGNREGA ಕಾಯಿದೆ ಅನ್ವಯ ರಚಿಸಲಾಗುವ ಕೇಂದ್ರ ಉದ್ಯೋಗ ಖಾತರಿ ಪರಿಷತ್ ಅಧ್ಯಕ್ಷರು _____?

ಅ) ಪ್ರಧಾನ ಮಂತ್ರಿ

ಆ) ಗ್ರಾಮೀಣಭಿವೃದ್ದಿ ಸಚಿವರು

ಇ) ಗೃಹ ಸಚಿವರು

ಈ) ಆರ್ಥಿಕ ಸಚಿವರು

ಗ್ರಾಮೀಣಭಿವೃದ್ದಿ ಸಚಿವರು

ಮಾನ್ಯ ಗ್ರಾಮೀಣಭಿವೃದ್ದಿ ಕೇಂದ್ರ ಸಚಿವರ ಅಧ್ಯಕ್ಷತೆಯಲ್ಲಿ ಕೇಂದ್ರ ಉದ್ಯೋಗ ಖಾತರಿ ಪರಿಷತ್ ರಚನೆಗೊಂಡಿರುತ್ತದೆ.ಅದೇ ರೀತಿ ಪ್ರಕರಣ 12ರಡಿಯಲ್ಲಿ ರಾಜ್ಯ ಸರ್ಕಾರವೂ ರಾಜ್ಯ ಉದ್ಯೋಗ ಖಾತರಿ ಪರಿಷತ್ ಸ್ಥಾಪಿಸಬೇಕು.ಇದಕ್ಕೆ ಅಧ್ಯಕ್ಷರನ್ನು ರಾಜ್ಯ ಸರ್ಕಾರ ನೇಮಿಸುತ್ತದೆ.ಕಾಯ್ದೆಯ ಅನುಷ್ಠಾನಕ್ಕೆ ಬೇಕಾದ ಸಲಹೆಗಳನ್ನು ಮತ್ತು ವರದಿಯನ್ನು ನೀಡುವುದು ಪರಿಷತ್ ಮುಖ್ಯ ಕಾರ್ಯವಾಗಿರುತ್ತದೆ.

38. ಆಶಾ (ASHA) ಕಾರ್ಯಕರ್ತೆಯಾಗಿ ಆಯ್ಕೆಯಾಗಲು ಕನಿಷ್ಠ ವಿದ್ಯಾರ್ಹತೆ ______?

www.karunaduexams.com

ಅ) ಏಳನೇ ತರಗತಿ

ಆ) ಎಂಟನೇ ತರಗತಿ

ಇ) ಹತ್ತನೇ ತರಗತಿ

ಈ) ಪಿಯುಸಿ

ಹತ್ತನೇ ತರಗತಿ

39. ಕರ್ನಾಟಕ ರಾಜ್ಯದ ನಾಲ್ಕನೇ ಹಣಕಾಸು ಆಯೋಗದ ಅಧ್ಯಕ್ಷರು ಯಾರು?

ಅ) ಸಿ.ಜಿ.ಚಿನ್ನಸ್ವಾಮಿ

ಆ) ಅಶ್ವಥ್ ನಾರಾಯಣ

ಇ) ಟಿ.ಎನ್.ನರಸಿಂಹಮೂರ್ತಿ

ಈ) ಅಮರನಾಥನ್

ಸಿ.ಜಿ.ಚಿನ್ನಸ್ವಾಮಿ ರವರು ರಾಜ್ಯದ ನಾಲ್ಕನೇ ಹಣಕಾಸು ಆಯೋಗದ ಅಧ್ಯಕ್ಷರಾಗಿದ್ದಾರೆ. ರಾಜ್ಯ ಹಣಕಾಸು ಆಯೋಗವನ್ನು ರಾಜ್ಯಪಾಲರು ಸಂವಿಧಾನದ 73ನೇ ತಿದ್ದುಪಡಿ ಅನ್ವಯ ಅನುಚ್ಛೇದ 243 (ಐ) ಜಾರಿಗೆ ಬಂದ ಒಂದು ವರ್ಷದೊಳಗಾಗಿ ಮತ್ತು ಅಲ್ಲಿಂದ ಪ್ರತಿ ಐದು ವರ್ಷಗಳಿಗೊಮ್ಮೆ ಪಂಚಾಯತಿಗಳ ಹಣಕಾಸು ಸ್ಥಿತಿಗತಿ ಪರಾಮರ್ಶೆ ಮಾಡಲು ರಾಜ್ಯ ಹಣಕಾಸು ಆಯೋಗವನ್ನು ರಚಿಸಬೇಕು. (ಪ್ರಶ್ನೆ: ರಾಜ್ಯ ಹಣಕಾಸು ಆಯೋಗ ಯಾರು ರಚಿಸುತ್ತಾರೆ, ಯಾವ ಅನುಚ್ಛೇದಡಿ ಮತ್ತು ಎಷ್ಟು ವರ್ಷಗಳಿಗೊಮ್ಮೆ, ಕೇಂದ್ರ ಹಣಕಾಸು ಆಯೋಗವನ್ನು ರಾಷ್ಟ್ರಪತಿಗಳು ಸಂವಿಧಾನದ ಅನುಚ್ಛೇದ 280 ರ ಪ್ರಕಾರ ರಚಿಸುತ್ತಾರೆ. 14ನೇ ಹಣಕಾಸು ಆಯೋಗದ ಅಧ್ಯಕ್ಷರು ವೈ ವಿ ರೆಡ್ಡಿ). ಕರ್ನಾಟಕದ ಮೊದಲ ಹಣಕಾಸು ಆಯೋಗದ ಅಧ್ಯಕ್ಷರು ಅಶ್ವಥ್ ನಾರಾಯಣ 10.6.94 ರಿಂದ 28.2.95 ನಂತರ ಡಾ.ಜಿ.ತಿಮ್ಮಯ್ಯ 95-96. ಎರಡನೇ ಆಯೋಗದ ಅಧ್ಯಕ್ಷರು ಟಿ,ಎನ್,ನರಸಿಂಹಮೂರ್ತಿ 2000-01, ಕೆ.ಪಿ.ಸುರೇಂದ್ರನಾಥ್ 28.2.2002 ರಿಂದ 23.12.2002. ಮೂರನೇ ಆಯೋಗದ ಅಧ್ಯಕ್ಷರು ಎ.ಜಿ.ಕೊಡಗಿ 2006-2008.

40. ಭಾರತದಲ್ಲಿ ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಕಾರ್ಯಕ್ರಮ ಜಾರಿಗೆ ಬಂದ ವರ್ಷ (RLEGP)______?

ಅ) ಆಗಸ್ಟ 15, 1983

ಆ) ಆಗಸ್ಟ 15, 1989

ಇ) ಅಕ್ಟೋಬರ್ 2, 1980

ಈ) ಅಕ್ಟೋಬರ್ 5, 1991

ಆಗಸ್ಟ 15, 1983

www.karunaduexams.com

ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಕಾರ್ಯಕ್ರಮ (Rural Landless Employment Guarantee Programme)ವನ್ನು ಆಗಸ್ಟ 15, 1983 ರಂದು ಜಾರಿಗೊಳಿಸಲಾಯಿತು. ಭೂರಹಿತ ಕುಟುಂಬಗಳಿಗೆ 100 ದಿನ ಉದ್ಯೋಗ ಭರವಸೆಯನ್ನು ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ. 1989 ರಲ್ಲಿ ಭೂರಹಿತ ಉದ್ಯೋಗ ಭರವಸೆ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮವನ್ನು ವಿಲೀನಿಗೊಳಿಸಿ ಜವಹಾರ್ ರೋಜಗಾರ್ ಯೋಜನೆಯನ್ನು ಜಾರಿಗೊಳಿಸಲಾಯಿತು.

41. ಚಂದ್ರಪ್ಪನು ಗ್ರಾಮ ಪಂಚಾಯತಿಯಿಂದ ಅಳವಡಿಸಿರುವ ಸಾರ್ವಜನಿಕ ಕುಡಿಯುವ ನೀರಿನ ಪೈಪನ್ನು ದುರಸ್ಥಿ ಮಾಡಿಸುವಂತೆ ಸಕಾಲ ಯೋಜನೆಯಡಿ ಗ್ರಾಮ ಪಂಚಾಯತಿಗೆ ಅರ್ಜಿ ನೀಡಿದ್ದಾನೆ. ಗ್ರಾಮ ಪಂಚಾಯತಿಯು ಎಷ್ಟು ದಿನದೊಳಗೆ ದುರಸ್ಥಿಪಡಿಸಬೇಕು?

ಅ) ಮೂರು

ಆ) ಐದು

ಇ) ಎಂಟು

ಈ) ಹತ್ತು

ಮೂರು

ಸಕಾಲ ಯೋಜನೆಯನ್ನು ಸಾರ್ವಜನಿಕರಿಗೆ ಗೊತ್ತುಪಡಿಸಿದ ದಿನದೊಳಗೆ ಸೇವೆಯನ್ನು ನೀಡಲು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಕಾಯಿದೆ.ಈ ಕಾಯಿದೆಯಡಿ ಗ್ರಾಮ ಪಂಚಾಯತಿ 11 ಸೇವೆಗಳು ಬರಲಿದ್ದು, ಯಾವುದೇ ವ್ಯಕ್ತಿ ಬರವಣಿಗೆ ಮೂಲಕ ಅಥವಾ ದೂರವಾಣಿ ಮೂಲಕ ದೂರು ದಾಖಲಿಸಬಹುದು.ನೆನಪಿಡಿ (ಕುಡಿಯುವ ನೀರು ಮತ್ತು ಬೀದಿ ದೀಪವನ್ನು ಅರ್ಜಿ ನೀಡಿದ ಮೂರು ದಿನದೊಳಗೆ ದುರಸ್ಥಿ ಪಡಿಸಬೇಕು. ಚರಂಡಿಯನ್ನು 7 ದಿನದೊಳಗೆ ಸ್ವಚ್ಛಪಡಿಸಬೇಕು).ಉಳಿದ ಸೇವೆಗಳಿಗೆ 30 ರಿಂದ 45 ದಿನಗಳ ಕಾಲವಕಾಶವಿದೆ.

42. ಗ್ರಾಮ ಪಂಚಾಯತಿ ಪುನರ್ ವಿಂಗಡಣಾ ಸಮಿತಿಯ ಅಧ್ಯಕ್ಷರಾಗಿದ್ದವರು ಯಾರು?

ಅ) ರಮೇಶ್ ಕುಮಾರ್

ಆ) ಎಸ್.ವಿ. ನಂಜಯ್ಯನಮಠ

ಇ) ಕೋಳಿವಾಡ

ಈ) ಕಾಗೋಡು ತಿಮ್ಮಪ್ಪ

ಎಸ್.ವಿ. ನಂಜಯ್ಯನಮಠ

ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣೆ ಮಾಡುವ ಸಲುವಾಗಿ ಮಾಜಿ ಶಾಸಕ ಎಸ್.ವಿ.ನಂಜಯ್ಯಮಠ ಅಧ್ಯಕ್ಷತೆಯಲ್ಲಿ ಗ್ರಾಮ ಪಂಚಾಯತಿ ಪುನರ್ ವಿಂಗಡಣಾ ಸಮಿತಿಯನ್ನು ರಚಿಸಲಾಗಿತ್ತು.ಎಸ್.ಕೆ.ಭಾಗವರ್, ಅಬ್ದುಲ್ ನಜೀರ್ಸಾಬ್, ಡಾ.ದೇವಯ್ಯ ಒಡೆಯರ್ ಸಮಿತಿ ಸದಸ್ಯರಾಗಿದ್ದರು.23 ವರ್ಷಗಳ ಹಿಂದೆ ಇದ್ದ ಜನಗಣತಿ ಆಧಾರದ ಮೇಲೆ

ಸ್ಥಾಪಿಸಲಾಗಿದ್ದ ಗ್ರಾಮಪಂಚಾಯತಿಗಳನ್ನು, 2011ರ ಜನಗಣತಿ ಆಧಾರದ ಮೇಲೆ ಗ್ರಾಮಪಂಚಾಯತಿಗಳ ಪುನರ್ ವಿಂಗಡಣೆ, ಪರಿಷ್ಕರಣೆ ಹಾಗೂ ಬದಲಾವಣೆ ಮಾಡಲು ಸಮಿತಿಯನ್ನು ಕೋರಲಾಗಿತ್ತು. ಸಮಿತಿಯ ವರದಿಯಂತೆ 5,629 ಗ್ರಾಮ ಪಂಚಾಯಿತಿಗಳ ಸಂಖ್ಯೆ 6020ಕ್ಕೆ ಏರಿದೆ.

43. ಸಂವಿಧಾನದ 73 ನೇ ತಿದ್ದುಪಡಿಯು ಜಾರಿಗೆ ಬಂದು, ಪಂಚಾಯತ್ ರಾಜ್ ಪದ್ಧತಿಗೆ ಸಂವಿಧಾನಿಕ ಮಾನ್ಯತೆ ದೊರೆತ ದಿನವನ್ನಾಗಿ "ರಾಷ್ಟ್ರೀಯ ಪಂಚಾಯತ್ ದಿನ" ಎಂದು ಪ್ರತಿವರ್ಷ ಕೆಳಕಂಡ ಯಾವ ದಿನದಂದು ಆಚರಿಸಲಾಗುತ್ತಿದೆ.

ಅ) ಏಪ್ರಿಲ್ 14

ಆ) ಏಪ್ರಿಲ್ 24

ಇ) ಅಕ್ಟೋಬರ್ 2

ಈ) ಅಕ್ಟೋಬರ್ 24

ಏಪ್ರಿಲ್ 24

44. ನಮ್ಮ ಗ್ರಾಮ ನಮ್ಮ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯಗಳನ್ನು ಗಮನಿಸಿ

A. ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿರುವ ಹಣಕಾಸು ಪರಿಸ್ಥಿತಿಯನ್ನು ಅವಲೋಕಿಸುವುದು
B. ವೆಚ್ಚವಿಲ್ಲದ ಮತ್ತು ಕಡಿಮೆ ವೆಚ್ಚದ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವುದು
C. ಸಂಪನ್ಮೂಲ ತಂಡಗಳಿಂದ ಮಾಹಿತಿ ಸಂಗ್ರಹಿಸುವುದು
D. ಗ್ರಾಮ ಸಭೆಯಲ್ಲಿ ಚರ್ಚಿಸಿ ಚಟುವಟಿಕೆಗಳಿಗೆ ಆದ್ಯತೆ ನಿರ್ಧರಿಸುವುದು

ಮೇಲ್ಕಂಡ ಚಟುವಟಿಕೆಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ

(1) C A B D
(2) A D B C
(3) C D A B
(4) D C A B

C D A B

45. ಗ್ರಾಮಗಳಲ್ಲಿ ನೈರ್ಮಲ್ಯತೆಯನ್ನು ಕಾಪಾಡಲು ಮತ್ತು ಭಾರತವನ್ನು ಬಯಲು ಬಹಿರ್ದೆಸೆ ಮುಕ್ತ ದೇಶವನ್ನಾಗಿಸಲು ಸರ್ಕಾರವು ಸ್ವಚ್ಛ ಭಾರತ ಅಭಿಯಾನವನ್ನು ಪ್ರಾರಂಭಿಸಿದೆ. ಸ್ವಚ್ಛ ಭಾರತ ಅಭಿಯಾನವನ್ನು ಈ ಹಿಂದೆ ಕೆಳಕಂಡ ಯಾವ ಹೆಸರಿನಿಂದ/ಹೆಸರುಗಳಿಂದ ಕರೆಯಲಾಗುತ್ತಿತ್ತು.

a. ಸ್ವಚ್ಛ ಭಾರತ ಅಭಿಯಾನ
b. ನಿರ್ಮಲ ಕರ್ನಾಟಕ
c. ಸಂಪೂರ್ಣ ಸ್ವಚ್ಛತಾ ಅಭಿಯಾನ

**<u>ಉತ್ತರಗಳು</u>**

www.karunaduexams.com

(1) a ಮತ್ತು b ಮಾತ್ರ

(2) a ಮತ್ತು c

(3) a ಮಾತ್ರ

(4) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

**46.** ನಮ್ಮ ಗ್ರಾಮ ನಮ್ಮ ಯೋಜನೆ ಸಿದ್ದಪಡಿಸುವಾಗ ಯಾರಿಗೆ ಹೆಚ್ಚಿನ ಆದ್ಯತೆ ಅಥವಾ ಪ್ರಾಮುಖ್ಯತೆ ನೀಡಬೇಕಿದೆ

ಅ) ಅತಿಸಣ್ಣ ರೈತರು, ವಿಧವೆಯರು, ಮಕ್ಕಳು, ಬಿ ಪಿ ಎಲ್ ಕುಟುಂಬದವರು

ಆ) ವೃದ್ದರು, ಅಂಗವಿಕಲರು, ಎ ಪಿ ಎಲ್, ಬಿ ಪಿ ಎಲ್ ಕುಟುಂಬದವರು

ಇ) ಪ.ಜಾ/ಪ.ಪಂ, ಅಂಗವಿಕಲರು, ವಸತಿರಹಿತರು, ಅತಿಸಣ್ಣ ರೈತರು

ಈ) ಮಹಿಳೆಯರು, ಮಕ್ಕಳು, ವಿಕಲಚೇತನರು, ಪ.ಜಾತಿ/ಪ.ಪಂಗಡ ದವರು

ಮಹಿಳೆಯರು, ಮಕ್ಕಳು, ವಿಕಲಚೇತನರು, ಪ.ಜಾತಿ/ಪ.ಪಂಗಡ ದವರು

47. "ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ" ಯೋಜನೆಗೆ ಶಿಫಾರಸ್ಸು ಮಾಡಿದ ಸಮಿತಿ _____?

**ಅ) ಅಶೋಕ್ ಮೆಹ್ತಾ ಸಮಿತಿ**

**ಆ) ಬಲವಂತ್ ರಾಯ್ ಮೆಹ್ತಾ ಸಮಿತಿ**

**ಇ) ಸಿಂಘ್ವಿ ಸಮಿತಿ**

**ಈ) ಜಿ ವಿ ಕೆ ರಾವ್ ಸಮಿತಿ**

**ಬಲವಂತ್ ರಾಯ್ ಮೆಹ್ತಾ ಸಮಿತಿ**

48. ಈ ಕೆಳಕಂಡ ರಾಷ್ಟ್ರೀಯ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳಲ್ಲಿ ಸದ್ಯ ಚಾಲ್ತಿಯಲ್ಲಿರುವ ಯೋಜನೆಗಳನ್ನು ಗುರುತಿಸಿ

A. ರಾಷ್ಟ್ರೀಯ ಕುಟುಂಬ ಪ್ರಯೋಜನ ಯೋಜನೆ

B. ಅನ್ನಪೂರ್ಣ ಯೋಜನೆ

C. ರಾಷ್ಟ್ರೀಯ ವಿಧವಾ ವೇತನ ಯೋಜನೆ

D. ರಾಷ್ಟ್ರೀಯ ವಿಕಲಚೇತನರ ವೇತನ ಯೋಜನೆ

**<u>ಉತ್ತರಗಳು</u>**

(1) C ಮತ್ತು D ಮಾತ್ರ

(2) A, C ಮತ್ತು D

(3) A, B ಮತ್ತು C

(4) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

www.karunaduexams.com

49. ಸುಕನ್ಯಾ ಸಮೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಗಮನಿಸಿ

A. 10 ವರ್ಷ ವಯಸ್ಸಿನ ಮಿತಿ ದಾಟದ ಬಾಲಕಿಯರ ಶಿಕ್ಷಣ ಮತ್ತು ಮದುವೆಗೆ ಆರ್ಥಿಕವಾಗಿ ನೆರವಾಗುವುದು

B. ಈ ಯೋಜನೆಯಡಿಯಲ್ಲಿ ಬಾಲಕಿಯ ಪೋಷಕರ ಹೆಸರಿನಲ್ಲಿ ಉಳಿತಾಯ ಖಾತೆ ತೆರೆಯಲಾಗುತ್ತದೆ

**ಉತ್ತರಗಳು**

(1) A ಸರಿಯಾಗಿದೆ B ತಪ್ಪಾಗಿದೆ

(2) A ತಪ್ಪಾಗಿದೆ B ಸರಿಯಾಗಿದೆ

(3) A ಮತ್ತು B ಎರಡೂ ಸರಿಯಾಗಿದೆ

(4) A ಮತ್ತು B ಎರಡೂ ತಪ್ಪಾಗಿದೆ

A ಸರಿಯಾಗಿದೆ B ತಪ್ಪಾಗಿದೆ

50. ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2015ಕ್ಕೆ ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು ______?

ಅ) ಹತ್ತನೇ ಡಿಸೆಂಬರ್, 2015

ಆ) ಹತ್ತನೇ ನವೆಂಬರ್, 2015

ಇ) ಹದಿನಾರನೇ ಡಿಸೆಂಬರ್, 2015

ಈ) ಇಪ್ಪತ್ತನೇ ಡಿಸೆಂಬರ್, 2015

ಹದಿನಾರನೇ ಡಿಸೆಂಬರ್, 2015

ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2015ಕ್ಕೆ 2015ರ ಡಿಸೆಂಬರ್ ತಿಂಗಳ ಹದಿನಾರನೇ ದಿನಾಂಕದಂದು ಒಪ್ಪಿಗೆ ದೊರೆತಿದೆ. [**ಗಮನಿಸಿ**: ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ 1993ರ ಏಪ್ರಿಲ್, 30ನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆ ದೊರೆತಿದೆ]

51. ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015 ಜಾರಿಗೆ ಬಂದ ದಿನಾಂಕ _____?

ಅ) 20.12.2015

ಆ) 12.01.2016

ಇ) 25.02.2016

ಈ) 12.03.2016

www.karunaduexams.com

25.02.2016

ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015ನ್ನು ಕರ್ನಾಟಕ ಸರ್ಕಾರ ದಿನಾಂಕ 25.02.2016 ರಿಂದ ಜಾರಿಗೆ ತಂದಿದೆ. [**ಗಮನಿಸಿ**: ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ-1993 ಜಾರಿಗೆ ಬಂದದ್ದು ದಿನಾಂಕ 10-05-1993 ರಿಂದ].

52. ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015 ಪ್ರಕಾರ ಶೀರ್ಷಿಕೆಯಲ್ಲಿ ಪಂಚಾಯತ್ ಬದಲಿಗೆ ಏನನ್ನು ಸೇರಿಸಲಾಗಿದೆ?

ಅ) ಗ್ರಾಮ ವಿಕಾಸ್ ಮತ್ತು ಪಂಚಾಯತ್ ರಾಜ್

ಆ) ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್

ಇ) ವಿಕೇಂದ್ರಿಕರಣ ಮತ್ತು ಪಂಚಾಯತ್ ರಾಜ್

ಈ) ಸ್ವರಾಜ್ಯ ಮತ್ತು ಪಂಚಾಯತ್ ರಾಜ್

ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್

2015ರ ತಿದ್ದುಪಡಿ ಮೂಲಕ ಪಂಚಾಯತ್ ರಾಜ್ ಅಧಿನಿಯಮದ ಶೀರ್ಷಿಕೆಯಲ್ಲಿ ಪಂಚಾಯತ್ ರಾಜ್ ಬದಲಿಗೆಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಸೇರಿಸಿ "**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ**" ವಾಗಿದೆ. ಆದ್ದರಿಂದ ಮುಂದೆ ಈ ನಿಯಮವನ್ನು **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ**ಎಂದೇ ತಿಳಿಯತಕ್ಕದ್ದು.

53. ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015 ಪ್ರಕಾರ ಜನವಸತಿ ಎಂದರೆ ಗ್ರಾಮದ ಪರಿಮಿತಿಯ ಹೊರಗೆ ಇರುವ ______?

ಅ) ಒಂದು ನೂರರಿಂದ ಮೂನ್ನರೈವತ್ತು ಜನಸಂಖ್ಯೆಯುಳ್ಳ ಪ್ರದೇಶ

ಆ) ಎರಡು ನೂರರಿಂದ ನಾಲ್ಕುನೂರು ಜನಸಂಖ್ಯೆಯಳ್ಳ ಪ್ರದೇಶ

ಇ) ಎರಡು ನೂರರಿಂದ ಐದು ನೂರು ಜನಸಂಖ್ಯೆಯುಳ್ಳ ಪ್ರದೇಶ

ಈ) ಒಂದು ನೂರರಿಂದ ಮೂರು ನೂರು ಜನಸಂಖ್ಯೆಯುಳ್ಳ ಪ್ರದೇಶ

ಒಂದು ನೂರರಿಂದ ಮೂನ್ನರೈವತ್ತು ಜನಸಂಖ್ಯೆಯುಳ್ಳ ಪ್ರದೇಶ

ಜನವಸತಿ ಎಂಬ ಪದವನ್ನು ಹೊಸದಾಗಿ ಪಂಚಾಯತ್ ರಾಜ್ ಕಾಯಿದೆಯಡಿ ಸೇರಿಸಲಾಗಿದೆ. ಜನವಸತಿ ಎಂದರೆ, ಗ್ರಾಮದ ಪರಿಮಿತಿಯ ಹೊರಗೆ ಇರುವ ಒಂದು ನೂರರಿಂದ ಮೂನ್ನರೈವತ್ತು ಜನಸಂಖ್ಯೆಯುಳ್ಳ ಸಣ್ಣ ವಸತಿ ಪ್ರದೇಶ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಇತರೆ ಸಣ್ಣ ವಸತಿ ಸಮೂಹ (Hamlet) ಅಥವಾ ಅಂಥ ಸಣ್ಣ ವಸತಿ ಪ್ರದೇಶ ಅಥವಾ ಸಣ್ಣ ವಸತಿ ಸಮೂಹಗಳ ಗುಂಪು [ಗಮನಿಸಿ: ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ-1993 ರಲ್ಲಿ ಜನವಸತಿ ಎಂಬ ಪದವಿಲ್ಲ].

www.karunaduexams.com

54. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಯಾವ ಅಧ್ಯಾನದಡಿ "ಪಂಚಾಯತ್ ರಾಜ್ ನೀತಿ ನಿರ್ದೇಶಕ ತತ್ವಗಳು" ಕಾಣಬಹುದಾಗಿದೆ?

ಅ) ಅಧ್ಯಾಯ Iಎ

ಆ) ಅಧ್ಯಾಯ IIಎ

ಇ) ಅಧ್ಯಾಯ IV

ಈ) ಅಧ್ಯಾಯ VI

ಅಧ್ಯಾಯ Iಎ

**ಗಮನಿಸಿ**: ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ-1993ರ ಅಧ್ಯಾಯ-I ಎರಡು ಪ್ರಕರಣಗಳನ್ನು ಹೊಂದಿತ್ತು. ಪ್ರಕರಣ 1 ರಲ್ಲಿ ಚಿಕ್ಕ ಹೆಸರು ಮತ್ತು ಪ್ರಾರಂಭ ಹಾಗೂ ಪ್ರಕರಣ 2 ರಲ್ಲಿ ಅರ್ಥ ವಿವರಣೆಗಳನ್ನು ನೀಡಲಾಗಿತ್ತು.2015 ರಲ್ಲಿ ಅಧ್ಯಾಯ-I ಕ್ಕೆ ತಿದ್ದುಪಡಿ ತಂದು **ಅಧ್ಯಾಯIಎ ಮತ್ತು ಪ್ರಕರಣ 2ಎ** ಅನ್ನುಸೇರ್ಪಡೆಗೊಳಿಸಿ **ಪ್ರಕರಣ 2ಎ ಅಡಿ ಪಂಚಾಯತ್ ನೀತಿ ನಿರ್ದೇಶಕ ತತ್ವಗಳನ್ನು ಅಳವಡಿಸಿಕೊಳ್ಳಲಾಗಿದೆ**.ಈ ತತ್ವಗಳ ಅನ್ವಯ ಪಂಚಾಯತಿಯು ಈ ಮುಂದಿನವುಗಳನ್ನು ಪ್ರೋತ್ಸಾಹಿಸಲು ಶ್ರಮಿಸಬೇಕು.(I) ಎಲ್ಲರಿಗೂ ಶುದ್ಧ ಕುಡಿಯುವ ನೀರು, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವುದು. (II) ಅಗತ್ಯ ಗ್ರಾಮೀಣ ಮೂಲ ಸೌಲಭ್ಯಗಳನ್ನು ಒದಗಿಸುವುದು (III) ತನ್ನ ನಿವಾಸಿಗಳ ಆರ್ಥಿಕ, ಸಾಮಾಜಿಕ ಮತ್ತು ಪರಿಸರಾತ್ಮಕ ಗುಣಮಟ್ಟವನ್ನು ವೃದ್ಧಿಸುವುದಕ್ಕಾಗಿ ಆಸ್ತಿಗಳ ನಿರ್ವಹಣೆ (IV) ಪಂಚಾಯತ್ ಅಧೀನದಲ್ಲಿರುವ ಸಂಪನ್ಮೂಲಗಳನ್ನು ಬಳಕೆ ಮಾಡಿಕೊಂಡು ಪಂಚಾಯತಿ ಪ್ರದೇಶದ ಅರಣ್ಯ ಮತ್ತು ವನ್ಯಜೀವಿಗಳನ್ನು ಸುಸ್ಥಿರ ಅಭಿವೃದ್ಧಿಗಾಗಿ ಮುಂದಿನ ಪೀಳಿಗೆಗಾಗಿ ಸಂರಕ್ಷಿಸುವುದು (V) ಸ್ಥಳೀಯ ಸಮುದಾಯದ ಕಲೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ರಕ್ಷಿಸುವುದು, ಕಾಪಾಡುವುದು ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುವುದು (VI) ನವಣೆ, ಸಜ್ಜೆ, ಬಿಳಿ ಜೋಳ, ಸಾಮೆ, ಕೋರ್ಲೆ ಇತ್ಯಾದಿ ಮತ್ತೊ ಔಷಧೀಯ ಮೌಲ್ಯವುಳ್ಳ ಗಿಡಮೂಲಿಕೆಗಳನ್ನು ಸಂರಕ್ಷಿಸುವುದು (VIII) ಕೃಷಿ-ಕೈಗಾರಿಕಾ ಕೇಂದ್ರಗಳು, ಗ್ರಾಮೀಣ ಗುಡಿ ಕೈಗಾರಿಕೆಗಳನ್ನು ಉತ್ತೇಜಿಸಿ ಉದ್ಯೋಗ ಸೃಷ್ಟಿಸುವುದು (IX) ಗ್ರಾಮೀಣ ಪ್ರದೇಶಗಳಲ್ಲಿ ಜನರ ಕೌಶಲ್ಯ, ಜ್ಞಾನ ಮತ್ತು ಇತರ ಸಾಮರ್ಥ್ಯಗಳಿಗೆ ಅನುಗುಣವಾಗಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು (X) ಶಾಂತಿಯುತ ಸಮಾಜ ಮತ್ತು ಕೋಮು ಸೌಹಾರ್ದವನ್ನು ಸಂರಕ್ಷಿಸುವುದು. [ಗಮನಿಸಿ: **ಒಟ್ಟು 10** ಪಂಚಾಯತ್ ನೀತಿ ನಿರ್ದೇಶಕ ತತ್ವಗಳನ್ನು ಸೇರ್ಪಡೆಗೊಳಿಸಲಾಗಿದೆ]

55. ಈ ಕೆಳಗಿನ ಯಾವುದು ಗ್ರಾಮ ಪಂಚಾಯತಿಯ "ಗ್ರಾಮ ಸ್ವರಾಜ್ ಘಟಕ"ದ ಭಾಗವಾಗಿಲ್ಲ?

ಅ) ಜನವಸತಿ ಸಭಾ

ಆ) ಕಿಸಾನ್ ಸಭಾ

www.karunaduexams.com

ಇ) ವಾರ್ಡ್ ಸಭಾ

ಈ) ಗ್ರಾಮ ಸಭಾ

ಕಿಸಾನ್ ಸಭಾ

**ಗಮನಿಸಿ:** ಪಂಚಾಯತ್ ರಾಜ್ ಅಧಿನಿಯಮ-1993ರ 3ನೇ (ಅಧ್ಯಾಯ II ರಲ್ಲಿ) ಪ್ರಕರಣಕ್ಕೆ ತಿದ್ದುಪಡಿ ತರುವ ಮೂಲಕ "ಗ್ರಾಮ ಸ್ವರಾಜ್ ಘಟಕಗಳನ್ನು" ಸೇರ್ಪಡೆಗೊಳಿಸಲಾಗಿದೆ. ಜನವಸತಿ ಸಭಾ, ವಾರ್ಡ್ ಸಭಾ ಮತ್ತು ಗ್ರಾಮ ಸಭಾಗಳು ಗ್ರಾಮ ಪಂಚಾಯತಿಯ ಘಟಕಗಳಾಗಿರುತ್ತವೆ.1993 ರ ಅಧಿನಿಯಮದಲ್ಲಿ ಪ್ರಕರಣ 3 ರಲ್ಲಿ ವಾರ್ಡ್ ಸಭೆ ಬಗ್ಗೆ ವ್ಯಾಖ್ಯಾನಿಸಲಾಗಿತ್ತು. ಅದೇ ರೀತಿ ದಯವಿಟ್ಟು ಗಮನಿಸಿ ಪ್ರಕರಣ 3ಎ ಗೂ ತಿದ್ದುಪಡಿ ತರಲಾಗಿದ್ದು, 3ಎ ರಲ್ಲಿ ಜನವಸತಿ ಸಭೆಯ ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ಸೇರ್ಪಡೆಗೊಳಿಸಲಾಗಿದೆ (1993 ರ ಅಧಿನಿಯಮದಲ್ಲಿ 3ಎ ಗ್ರಾಮ ಸಭೆಯ ಬಗ್ಗೆ ವಿಶ್ಲೇಷಿಲಾಗಿತ್ತು). ಜನವಸತಿ ಸಭೆಯು ಮಾಡವೇಕಾದ 21 ಪ್ರಕಾರ್ಯಗಳನ್ನು 3ಎ ರಲ್ಲಿ ಉಲ್ಲೇಖಿಸಲಾಗಿದೆ.

56. ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಎಷ್ಟನೇ ಪ್ರಕರಣದಡಿ ಗ್ರಾಮ ಸ್ವರಾಜ್ ಘಟಕಗಳನ್ನು ಉಲ್ಲೇಖಿಸಲಾಗಿದೆ**?**

ಅ) ಪ್ರಕರಣ 3

ಆ) ಪ್ರಕರಣ 4

ಇ) ಪ್ರಕರಣ 5

ಈ) ಪ್ರಕರಣ 6

ಪ್ರಕರಣ 3

ಈಗಾಗಲೇ ಹೇಳಿರುವಂತೆ ಪಂಚಾಯತ್ ರಾಜ್ ಅಧಿನಿಯಮದ 3ನೇ ಪ್ರಕರಣಕ್ಕೆ ತಿದ್ದುಪಡಿ ತರುವ ಮೂಲಕ ಗ್ರಾಮ ಸ್ವರಾಜ್ ಘಟಕಗಳನ್ನು ಸೇರ್ಪಡೆಗೊಳಿಸಲಾಗಿದೆ.ಜನವಸತಿ ಸಭಾ, ವಾರ್ಡ್ ಸಭಾ ಮತ್ತು ಗ್ರಾಮ ಸಭಾಗಳು ಗ್ರಾಮ ಪಂಚಾಯತಿಯ ಘಟಕಗಳಾಗಿರುತ್ತವೆ.

57. ಯಾವುದೇ ಒಂದು ಪ್ರದೇಶವನ್ನು ಜನವಸತಿ ಪ್ರದೇಶವೆಂದು ಘೋಷಿಸುವ ಅಧಿಕಾರ ಯಾರಿಗಿದೆ?

ಅ) ಗ್ರಾಮ ಪಂಚಾಯತಿ

ಆ) ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ಇ) ಜಿಲ್ಲಾಧಿಕಾರಿ

ಈ) ಉಪವಿಭಾಗಧಿಕಾರಿ

ಜಿಲ್ಲಾಧಿಕಾರಿ

www.karunaduexams.com

ಜಿಲ್ಲಾಧಿಕಾರಿಗಳು ಸಮೀಕ್ಷೆ ಆಧಾರವ ಮೇಲೆ ಒಂದು ಪ್ರದೇಶವನ್ನು ಜನವಸತಿ ಪ್ರದೇಶವೆಂದು ಘೋಷಿಸುವ ಅಧಿಕಾರವನ್ನು ಹೊಂದಿದ್ದಾರೆ.

58. ವಾರ್ಡ್ ಸಭೆಯನ್ನು ಕರೆಯಲು ಮತ್ತು ಅಧ್ಯಕ್ಷತೆಯನ್ನು ವಹಿಸಲು ವಿಫಲನಾಗುವ ಸದಸ್ಯರು ಗ್ರಾಮ ಪಂಚಾಯತಿಗೆ ಎಷ್ಟು ರೂಪಾಯಿಗಳ ದಂಡವನ್ನು ತೆರಬೇಕು?

ಅ) ರೂ 100

ಆ) ರೂ 200

ಇ) ರೂ 300

ಈ) ರೂ 500

ವಾರ್ಡ್ ಸಭೆಯನ್ನು ಕರೆಯಬೇಕಾದ ಅಥವಾ ವಾರ್ಡ್ ಸಭೆಯನ್ನು ನಡೆಸುವುದು ಅವಶ್ಯಕವಾಗಿರುವಾಗ ವಾರ್ಡ್ ಚುನಾಯಿತ ಸದಸ್ಯನು ಸಂಧರ್ಭಾನುಸಾರ ಸಭೆಯನ್ನು ಕರೆಯುವುದಕ್ಕೆ ಮತ್ತು ಅಧ್ಯಕ್ಷತೆಯನ್ನು ವಹಿಸುವುದಕ್ಕೆ ವಿಫಲವಾದರೆ ರೂ ಒಂದು ನೂರು ರೂಪಾಯಿಯನ್ನು ಗ್ರಾಮ ಪಂಚಾಯತಿ ನಿಧಿಗೆ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು ಮತ್ತು ಅಂಥ ವಿಫಲತೆಗೆ ವಿವರಣೆಯನ್ನು ನೀಡತಕ್ಕದ್ದು.

59. ಜನವಸತಿ ಸಭಾಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

I) ಜನವಸತಿ ಸಭಾಗಳು ಆರು ತಿಂಗಳಿಗೆ ಕನಿಷ್ಠ ಒಂದು ಸಲ ಸಭೆ ಸೇರಬೇಕು

II) ಜನವಸತಿ ಸಭಾಗಳು ಆರು ತಿಂಗಳಿಗೆ ಕನಿಷ್ಠ ಒಂದು ಸಲ ಸಭೆ ಸೇರಬೇಕು

III) ಒಟ್ಟು ಮತದಾರರ ಪೈಕಿ ಕನಿಷ್ಠ ಐದನೇ ಒಂದರಷ್ಟು ಇಲ್ಲವೆ 20 ಸದಸ್ಯರು ಇದರಲ್ಲಿ ಯಾವುದು ಕಡಿಮೆಯೋ ಅಷ್ಟು ಸಂಖ್ಯೆಯಲ್ಲಿ ಕೋರಂ ಇರಬೇಕು

ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಆರಿಸಿ:

ಅ) I ಮಾತ್ರ

ಆ) I & II ಮಾತ್ರ

ಇ) II & III ಮಾತ್ರ

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ಪ್ರಕರಣ “3ಬಿ” ಪ್ರಕಾರಜನವಸತಿ ಸಭಾಗಳು ಆರು ತಿಂಗಳಿಗೆ ಕನಿಷ್ಠ ಒಂದು ಸಲ ಸಭೆ ಸೇರಬೇಕು. ಆಯಾ ಜನವಸತಿ ಪ್ರದೇಶವನ್ನು ಪ್ರತಿನಿಧಿಸುವ ವಾರ್ಡಿನ ಚುನಾಯಿತ ಸದಸ್ಯ ಆ ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕು. ಒಂದು ವೇಳೆ ಅಂತಹ ಸದಸ್ಯ ಜನವಸತಿ ಸಭೆಯನ್ನು ಕರೆಯಲು ವಿಫಲವಾದರೆ ಪಿ.ಡಿ.ಓ/ಕಾರ್ಯದರ್ಶಿ ಸಭೆಯನ್ನು ಕರೆಯತಕ್ಕದ್ದು ಹಾಗೂ ಆ

www.karunaduexams.com

ಸಭೆಯಲ್ಲಿ ಉಪಸ್ಥಿತಿಯಿರುವ ಇತರೆ ಸದಸ್ಯರಲ್ಲಿ ಒಬ್ಬರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಒಟ್ಟು ಮತದಾರರ ಪೈಕಿ ಕನಿಷ್ಠ ಐದನೇ ಒಂದರಷ್ಟು ಇಲ್ಲವೆ 20 ಸದಸ್ಯರು ಇದರಲ್ಲಿ ಯಾವುದು ಕಡಿಮೆಯೋ ಅಷ್ಟು ಸಂಖ್ಯೆಯಲ್ಲಿ ಕೋರಂ ಇರಬೇಕು. ಅವರ ಪೈಕಿ ಶೇ ಮೂವತ್ತಕ್ಕೆ ಕಡಿಮೆ ಇಲ್ಲದಷ್ಟು ಮಹಿಳೆಯರು ಇರತಕ್ಕದ್ದು ಮತ್ತು ಅನುಸೂಚಿ ಜಾತಿ ಹಾಗೂ ಪಂಗಂಡಗಳ ವ್ಯಕ್ತಿಗಳ ಅವರ ಜನಸಂಖ್ಯೆಯ ದಾಮಾಷಾ ಪ್ರಮಾಣಕ್ಕೆ ಅನುಸಾರವಾಗಿ ಸಭೆಯಲ್ಲಿ ಇರತಕ್ಕದ್ದು. ಸಾಮಾಜಿಕ ನ್ಯಾಯ ಎತ್ತಿ ಹಿಡಿಯುವುದು, ನೈರ್ಮಲ್ಯ ಕಾಪಾಡಲು ಸಲಹೆ ನೀಡುವುದು, ವಸತಿ ಪ್ರದೇಶಕ್ಕೆ ಅಗತ್ಯವಾದ ಯೋಜನೆ ರೂಪಿಸುವುದು, ಬೀದಿದೀಪಗಳ ನಿರ್ವಹಣೆ, ನೀರಿನ ಪೂರೈಕೆ ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳುವುದು ಜನವಸತಿ ಸಭಾದ ಕರ್ತವ್ಯಗಳಾಗಿವೆ'.

60. ಗ್ರಾಮ ಪಂಚಾಯತಿ ಗ್ರಾಮ ಸಭಾಗೆ ಸಂಬಂಧಿಸಿದಂತೆ ಕೆಳಕಂಡ ಹೇಳಿಕೆಗಳನ್ನು ಗಮನಿಸಿ:

I) ಗ್ರಾಮ ಪಂಚಾಯತಿ ಅಧ್ಯಕ್ಷನು ಗ್ರಾಮ ಸಭೆಯ ಅಧ್ಯಕ್ಷತೆಯನ್ನ ವಹಿಸತಕ್ಕದ್ದು

II) ಎರಡು ಸಭೆಗಳ ಅಂತರ ಆರು ತಿಂಗಳಿಗೆ ಮೀರದಂತೆ ಇರತಕ್ಕದ್ದು

III) ಗ್ರಾಮ ಸಭೆಯನ್ನು ಕರೆಯಲು ಅಧ್ಯಕ್ಷನು ವಿಫಲವಾದರೆ ಪಿ.ಡಿ.ಓ ಅಂಥ ಸಭೆಯನ್ನು ಕರೆಯತಕ್ಕದ್ದು.

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II ಮಾತ್ರ

ಆ) II & III ಮಾತ್ರ

ಇ) I & III ಮಾತ್ರ

ಈ) ಮೇಲಿನ ಎಲ್ಲವೂ

ಹೇಳಿಕೆ ಒಂದು ಮತ್ತು ಎರಡು ಸರಿಯಾಗಿವೆ. ಹೇಳಿಕೆ ಮೂರು ತಪ್ಪು ಏಕೆಂದರೆ ಗ್ರಾಮ ಸಭೆಯನ್ನು ಕರೆಯಲು ಅಧ್ಯಕ್ಷನು ವಿಫಲವಾದರೆ ಕಾರ್ಯನಿರ್ವಾಹಣಾಧಿಕಾರಿಯು ಅಂತಹ ಸಭೆಯನ್ನು ಕರೆಯತಕ್ಕದ್ದು [ಗಮನಿಸಿ: ಜನವಸತಿ ಮತ್ತು ವಾರ್ಡ್ ಸಭೆಯಲ್ಲಿ ಸಂಬಂಧಿಸಿದ ಸದಸ್ಯನು ಸಭೆ ಕರೆಯಲು ವಿಫಲವಾದರೆ ಸಂಬಂಧಪಟ್ಟ <u>ಪಿ.ಡಿ.ಓ</u> ಅಥವಾ ಸಂದರ್ಭನುಸಾರ <u>ಕಾರ್ಯದರ್ಶಿ</u> ಅಂತಹ ಸಭೆಯನ್ನು ಕರೆಯತಕ್ಕದ್ದು]. **ಗಮನಿಸಿ:** ಗ್ರಾಮ ಪಂಚಾಯತಿ ಅಧ್ಯಕ್ಷನು ಎಲ್ಲಾ ಗ್ರಾಮಸಭಾಗಳ ಮೊದಲ ಸಭೆಯನ್ನು ಸಾಧ್ಯವಾಗಬಹುದಾದಷ್ಟು **<u>ಅರವತ್ತು ದಿನಗಳ</u>** ಒಳಗೆ ಕರೆಯತಕ್ಕದ್ದು ಮತ್ತು ತದನಂತರದ ಸಭೆಯು ಗ್ರಾಮಸಭೆಯು ನಿರ್ಧರಿಸಿದಂಥ ದಿನಾಂಕದಂದು ಕರೆಯತಕ್ಕದ್ದು. ಎರಡು ಸಭೆಗಳ ಅಂತರ ಕನಿಷ್ಠ ಆರು ತಿಂಗಳು ಮೀರದಂತೆ ಇರತಕ್ಕದ್ದು.ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷನು ವಹಿಸಬೇಕು.ಅಧ್ಯಕ್ಷನ ಅನುಪಸ್ಥಿಯಲ್ಲಿ ಉಪಾಧ್ಯಕ್ಷನು ವಹಿಸಬೇಕು. ಇವರಿಬ್ಬರ ಅನುಪಸ್ಥಿಯಲ್ಲಿ ಸಭೆಯಲ್ಲಿ ಹಾಜರಿದ್ದ ಸದಸ್ಯರು ತಮ್ಮಲ್ಲಿ

www.karunaduexams.com

ಒಬ್ಬರನ್ನು ಆಯ್ಕೆ ಮಾಡಿಕೊಂಡು ಅಧ್ಯಕ್ಷತೆಯನ್ನು ವಹಿಸತಕ್ಕದ್ದು [ಇಲ್ಲಿ ಗಮನಿಸಿ: ಜನವಸತಿ ಸಭಾ ಮತ್ತು ವಾರ್ಡ್ ಸಭಾದಲ್ಲಿ ಅಧ್ಯಕ್ಷತೆ ವಹಿಸುವ ಸದಸ್ಯನು ಲಭ್ಯವಿಲ್ಲದಾಗ ಉಪಸ್ಥಿತರಿರುವ ಸದಸ್ಯರು ಗ್ರಾಮ ಪಂಚಾಯತ್ ಯಾವೊಬ್ಬ ಇತರೆ ಮತದಾರರ ಅಧ್ಯಕ್ಷತೆ ವಹಿಸಲು ಆಯ್ಕೆಮಾಡುವುದು]. **ದಯವಿಟ್ಟು ಗಮನಿಸಿ**: **ಪ್ರಕರಣ 3ಇ ಗ್ರಾಮ ಸಭೆಯ ಬಗ್ಗೆ, ಪ್ರಕರಣ 3ಎಫ್ ಗ್ರಾಮ ಸಭೆಯ ಕರ್ತ್ಯವ್ಯಗಳ ಬಗ್ಗೆ ಮತ್ತು ಪ್ರಕರಣ 3ಜಿ ಗ್ರಾಮ ಸಭಾದ ಸಭೆಗಳ ಬಗ್ಗೆ ಮತ್ತು ಪ್ರಕರಣ 3ಹೆಚ್ ವಿಶೇಷ ಗ್ರಾಮ ಸಭಾದ ಬಗ್ಗೆ ವಿವರಣೆಗಳನ್ನು ಒಳಗೊಂಡಿದೆ.**ಪಂಚಾಯತ್ ರಾಜ್ ಅಧಿನಿಯಮ -1993 ರಲ್ಲಿ ಪ್ರಕರಣ 3ಎ ರಲ್ಲಿ ಮಾತ್ರ ಗ್ರಾಮ ಸಭೆಯನ್ನು ಉಲ್ಲೇಖಿಸಲಾಗಿತ್ತು.2015ರ ತಿದ್ದುಪಡಿ ನಂತರ ಪ್ರಕರಣ 3ಇ, ಪ್ರಕರಣ 3ಎಫ್ ಮತ್ತು ಪ್ರಕರಣ 3ಜಿ ಗಳನ್ನು ಹೊಸದಾಗಿ ಸೇರಿಸಲಾಗಿದೆ.1993 ಅಧಿನಿಯಮದ ಅಧ್ಯಾಯ II ವಾರ್ಡ್ ಮತ್ತು ಗ್ರಾಮ ಸಭೆಗೆ ಸಂಬಂಧಿಸಿದಾಗಿತ್ತು ಹಾಗೂ ಕೇವಲ ಪ್ರಕರಣ 3 ಮತ್ತು 3ಎ ಅನ್ನು ಒಳಗೊಂಡಿತ್ತು. ತಿದ್ದುಪಡಿಯ ನಂತರ ಅಧ್ಯಾಯ II ಜನವಸತಿ ಸಭಾ, ವಾರ್ಡ್ ಸಭಾ ಮತ್ತು ಗ್ರಾಮ ಸಭಾಗಳನ್ನು ಒಳಗೊಂಡಿದೆ (ಗ್ರಾಮ ಸ್ವರಾಜ್ ಘಟಕ) ಹಾಗೂ ಪ್ರಕರಣ 3 ರಿಂದ ಪ್ರಕರಣ 3ಎ, ಪ್ರಕರಣ 3ಬಿ, ಪ್ರಕರಣ 3ಸಿ, ಪ್ರಕರಣ 3ಡಿ, ಪ್ರಕರಣ 3ಇ, ಪ್ರಕರಣ 3ಎಫ್ ಮತ್ತು ಪ್ರಕರಣ 3ಜಿ ಒಳಗೊಂಡಿದೆ.2015 ತಿದ್ದುಪಡಿಯ ಪ್ರಕಾರ ಸಂಕ್ಷಿಪ್ತವಾಗಿ ಹೇಳುವುದಾದರೆ ಅಧ್ಯಾಯ II ಪ್ರಕರಣ 3 ರಿಂದ ಪ್ರಕರಣ 3ಜಿ ಒಳಗೊಂಡಿದೆ.

- ಪ್ರಕರಣ 3: ಗ್ರಾಮ ಸ್ವರಾಜ್ ಘಟಕಗಳು
- ಪ್ರಕರಣ 3ಎ: ಜನವಸತಿ ಸಭೆಯ ಪ್ರಕಾರ್ಯ ಮತ್ತು ಅಧಿಕಾರಿಗಳು
- ಪ್ರಕರಣ 3ಬಿ: ಜನವಸತಿ ಸಭಾದ ಸಭೆಗಳು
- ಪ್ರಕರಣ 3ಸಿ: ವಾರ್ಡ್ ಸಭಾ
- ಪ್ರಕರಣ 3ಡಿ: ವಾರ್ಡ್ ಸಭಾದ ಸಭೆಗಳು
- ಪ್ರಕರಣ 3ಇ: ಗ್ರಾಮ ಸಭೆ
- ಪ್ರಕರಣ 3ಎಫ್: ಗ್ರಾಮ ಸಭಾದ ಕರ್ತವ್ಯಗಳು
- ಪ್ರಕರಣ 3ಜಿ: ಗ್ರಾಮಸಭಾದ ಸಭೆಗಳು
- ಪ್ರಕರಣ 3ಹೆಚ್: ಗ್ರಾಮಸಭಾದ ವಿಶೇಷ ಸಭೆ

**61.** ಗ್ರಾಮ ಪಂಚಾಯತಿಯ ಅಧ್ಯಕ್ಷನು ಗ್ರಾಮ ಸಭೆಯನ್ನು ಕರೆಯಬೇಕಾದ ಅಥವಾ ಅವಶ್ಯಕವಿದ್ದಾಗ ಕರೆಯಲು ವಿಫಲವಾದರೆ ____ ರೂ ಗಳನ್ನು ಗ್ರಾಮ ಪಂಚಾಯತಿಯ ನಿಧಿಗೆ ಸಂದಾಯ ಮಾಡಬೇಕು?

ಅ) ರೂ 500

ಆ) ರೂ 750

ಇ) ರೂ 1000

www.karunaduexams.com

ಈ) ರೂ 1500

ರೂ 1000

ದಯವಿಟ್ಟು ಗಮನಿಸಿ: ಪಂಚಾಯತ್ ರಾಜ್ ಅಧಿನಿಯಮ 1993ಕ್ಕೆ 2015ಕ್ಕೆ ತಿದ್ದುಪಡಿ ಮೂಲಕ ಜನವಸತಿ ಸಭಾ, ವಾರ್ಡ್ ಸಭಾ ಮತ್ತು ಗ್ರಾಮ ಸಭಾವನ್ನು ಕರೆಯುವ ಹೊಣೆಗಾರಿಕೆಯನ್ನು ಚುನಾಯಿತ ಸದಸ್ಯರಿಗೆ ನೀಡಲಾಗಿದೆ. ಜನವಸತಿ ಸಭೆಯನ್ನ ಜನವಸತಿ ಪ್ರದೇಶದ ಸದಸ್ಯನು ಕರೆಯಬೇಕು, ವಾರ್ಡ್ ಸಭೆಯನ್ನ ಆ ವಾರ್ಡ್ ನ ಸದಸ್ಯನು ಕರೆಯಬೇಕು ಅದೇ ರೀತಿ ಗ್ರಾಮ ಸಭೆಯನ್ನ ಗ್ರಾಮ ಪಂಚಾಯತಿ ಅಧ್ಯಕ್ಷನು ಕರೆಯಬೇಕು. ಅವಶ್ಯವಿದ್ದಾಗ ಜನವಸತಿ ಸಭೆಯನ್ನು ಕರೆಯಲು ಮತ್ತು ಅಧ್ಯಕ್ಷತೆ ವಹಿಸಲು ವಿಫಲನಾಗುವ ಸದಸ್ಯನು ಯಾವುದೇ ದಂಡವನ್ನು ತೆರಬೇಕಾಗಿಲ್ಲ. ಆದರೆ ವಾರ್ಡ್ ಸಭೆ ಕರೆಯಲು ಮತ್ತು ಅಧ್ಯಕ್ಷತೆ ವಹಿಸಲು ಸದಸ್ಯನು ವಿಫಲವಾದರೆ ರೂ 100 ಅನ್ನು ಗ್ರಾಮ ಪಂಚಾಯತಿಯ ನಿಧಿಗೆ ಸಂದಾಯ ಮಾಡಬೇಕು ಮತ್ತು ವಿಫಲತೆಗೆ ವಿವರಣೆಯನ್ನು ನೀಡಬೇಕು. ಗ್ರಾಮ ಪಂಚಾಯತಿಯ ಅಧ್ಯಕ್ಷನು ಗ್ರಾಮ ಸಭೆಯನ್ನು ಕರೆಯಬೇಕಾದ ಅಥವಾ ಅವಶ್ಯಕವಿದ್ದಾಗ ಕರೆಯಲು ವಿಫಲವಾದರೆ ರೂ 1000 ವನ್ನು ಗ್ರಾಮ ಪಂಚಾಯತಿಯ ನಿಧಿಗೆ ಸಂದಾಯ ಮಾಡಬೇಕು ಮತ್ತು ಮುಂದಿನ ಗ್ರಾಮ ಸಭೆಯಲ್ಲಿ ವಿಫಲತೆಗೆ ಬಗ್ಗೆ ಕಾರಣ ನೀಡಬೇಕು [ನೆನಪಿಡಿ: ಈ ಮೊತ್ತವನ್ನು ಗ್ರಾಮ ಪಂಚಾಯತಿ ನಿಧಿಗೆ ಸಂದಾಯ ಮಾಡಬೇಕು].

62. ಜನವಸತಿ ಸಭಾ, ವಾರ್ಡ್ ಸಭಾ ಮತ್ತು ಗ್ರಾಮ ಸಭಾಗಳನ್ನು ಕೊನೆಯ ಪಕ್ಷ ಎಷ್ಟು ತಿಂಗಳಿಗೊಮ್ಮೆ ನಡೆಯತಕ್ಕದ್ದು?

ಅ) ಮೂರು

ಆ) ನಾಲ್ಕು

ಇ) ಆರು

ಈ) ಐದು

ಆರು

ಈಗಾಗಲೇ ನಿಮಗೆ ತಿಳಿದಿರುವಂತೆ 2015 ತಿದ್ದುಪಡಿಯಂತೆ ಗ್ರಾಮ ಪಂಚಾಯತಿಗಳು ಮೂರು ಬಗೆಯ ಸಭೆಯನ್ನು ಆಯೋಜಿಸಬೇಕು.ಮೊದಲು ಕೇವಲ ವಾರ್ಡ್ ಮತ್ತು ಗ್ರಾಮ ಸಭೆಯನ್ನು ಆಯೋಜಿಸಬೇಕಿತ್ತು.ಜನವಸತಿ ಸಭೆಯನ್ನು ಹೊಸದಾಗಿ ಸೇರಿಸಲಾಗಿದೆ.ಈ ಮೂರು ಸಭೆಗಳನ್ನು ಕೊನೆಯ ಪಕ್ಷ ಆರು ತಿಂಗಳಿಗೊಮ್ಮೆ ಅಂದರೆ ವರ್ಷಕ್ಕೆ ಎರಡು ಬಾರಿ ನಡೆಸುವುದು ಕಡ್ಡಾಯವಾಗಿದೆ. [ಗಮನಿಸಿ: ಜನವಸತಿ ಸಭೆ ಮತ್ತು ವಾರ್ಡ್ ಸಭೆ ಗಳನ್ನು ಗ್ರಾಮ ಸಭಾದ ಸಭೆಯು ಸೇರುವ ತಿಂಗಳಿನ ಕನಿಷ್ಠ ಒಂದು ತಿಂಗಳು ಮೊದಲು ಸಭೆ ಸೇರತಕ್ಕದ್ದು].

www.karunaduexams.com

63. ಜನವಸತಿ ಮತ್ತು ವಾರ್ಡ್ ಸಭಾಗಳ ವಿಶೇಷ ಸಭೆಗೆ ಸಂಬಂಧಿಸಿದಂತೆ ಈ ಹೇಳಿಕೆಗಳನ್ನು ಗಮನಿಸಿ:

I) ಕನಿಷ್ಠ ಪಕ್ಷ ಶೇ 20% ಮತದಾರರು ಲಿಖಿತವಾಗಿ ಮನವಿ ಸಲ್ಲಿಸಿದಾಗ ವಿಶೇಷ ಸಭೆಗಳನ್ನು ಕರೆಯತಕ್ಕದ್ದು

II) ಮೂರು ತಿಂಗಳುಗಳ ಅವಧಿಯೊಳಗೆ ಎರಡು ಸಲ ವಿಶೇಷ ಸಭೆಯನ್ನು ನಡೆಸುವಂತಿಲ್ಲ

III) ವಿಶೇಷ ಸಭೆಯ ಅಧ್ಯಕ್ಷತೆಯನ್ನು ಪಂಚಾಯತಿ ಅಧ್ಯಕ್ಷರು ವಹಿಸತಕ್ಕದ್ದು

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

ಅ) I & II ಮಾತ್ರ

ಆ) II & III ಮಾತ್ರ

ಇ) I & III ಸರಿ

ಈ) ಮೇಲಿನ ಎಲ್ಲವೂ

II & III ಮಾತ್ರ

ಜನವಸತಿ ಸಭಾ ಮತ್ತು ವಾರ್ಡ್ ಸಭಾದ ವಿಶೇಷ ಸಭೆಯನ್ನು ಕರೆಯಬೇಕೆಂದರೆ ಆಯಾ ಜನವಸತಿ ಪ್ರದೇಶ ಮತ್ತು ವಾರ್ಡ್ ನ ಕನಿಷ್ಠ ಪಕ್ಷ ಶೇಕಡಾ 10ರಷ್ಟು ಮತದಾರರು ಲಿಖಿತದಲ್ಲಿ ಮನವಿ ಸಲ್ಲಿಸಬೇಕು ಮತ್ತು ವಿಷಯವನ್ನು ಸ್ಪಷ್ಟಪಡಿಸಬೇಕು. ಪರಂತು ಮೂರು ತಿಂಗಳುಗಳ ಅವಧಿಯೊಳಗೆ ಎರಡು ಸಲ ವಿಶೇಷ ಸಭೆಯನ್ನು ನಡೆಸುವಂತಿಲ್ಲ. ಪ್ರಕೃತಿ ವಿಕೋಪಗಳು ಸಂಬಂಧಿಸಿದಾಗ ಅಥವಾ ಸಾರ್ವಜನಿಕ ಪ್ರಾಮುಖ್ಯತೆಯ ತುರ್ತು ವಿಷಯದ ಸಂದರ್ಭದಲ್ಲಿ ವಿಶೇಷ ಸಭೆಗಳನ್ನು ಕರೆಯಬಹುದಾಗಿದ್ದು, ಸಂಬಂಧಿಸಿದ ಸದಸ್ಯರು ಮತ್ತು ಸಂಬಂಧಪಟ್ಟ ಪಂಚಾಯತಿ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಅಥವಾ ಯಾರೇ ಚುನಾಯಿತ ಸದಸ್ಯರು ಸಭೆ ಹಾಜರಾಗಬೇಕು. ಅಧ್ಯಕ್ಷನು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕು ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ವಹಿಸಬೇಕು.

64. ಗ್ರಾಮ ಸಭಾದ ಸಾಮಾನ್ಯ ಸಭೆಗೆ ಅಗತ್ಯವಿರುವ ಕೋರಂ ______ಇವುಗಳಲ್ಲಿ ಯಾವುದು ಕಡಿಮೆಯೊ ಅಷ್ಟಕ್ಕಿಂತ ಕಡಿಮೆ ಇರಕ್ಕದಲ್ಲ. ಖಾಲಿ ಬಿಟ್ಟ ಜಾಗವನ್ನು ಸರಿಯಾದ ಉತ್ತರದೊಂದಿಗೆ ತುಂಬಿ?

ಅ**)** ಗ್ರಾಮಸಭಾದಲ್ಲಿರುವ ಮತದಾರರ ಒಟ್ಟು ಸಂಖ್ಯೆ ಹತ್ತನೇ ಒಂದು ಭಾಗದಷ್ಟು ಮತದಾರರು ಅಥವಾ ನೂರು ಸದಸ್ಯರು

ಆ) ಗ್ರಾಮಸಭಾದಲ್ಲಿರುವ ಮತದಾರರ ಒಟ್ಟು ಸಂಖ್ಯೆ ಹದಿನೈದನೇ ಒಂದು ಭಾಗದಷ್ಟು ಮತದಾರರು ಅಥವಾ ನೂರೈವತ್ತು ಸದಸ್ಯರು

ಇ) ಗ್ರಾಮಸಭಾದಲ್ಲಿರುವ ಮತದಾರರ ಒಟ್ಟು ಸಂಖ್ಯೆ ಇಪ್ಪತ್ತನೇ ಒಂದು ಭಾಗದಷ್ಟು ಮತದಾರರು ಅಥವಾ ಎರಡು ನೂರು ಸದಸ್ಯರು

www.karunaduexams.com

ಈ) ಗ್ರಾಮಸಭಾದಲ್ಲಿರುವ ಮತದಾರರ ಒಟ್ಟು ಸಂಖ್ಯೆ ಇಪ್ಪತ್ತೈದನೇ ಒಂದು ಭಾಗದಷ್ಟು ಮತದಾರರು ಅಥವಾ ಎರಡು ನೂರೈವತ್ತು ಸದಸ್ಯರು

ಗ್ರಾಮಸಭಾದಲ್ಲಿರುವ ಮತದಾರರ ಒಟ್ಟು ಸಂಖ್ಯೆ ಹತ್ತನೇ ಒಂದು ಭಾಗದಷ್ಟು ಮತದಾರರು ಅಥವಾ ನೂರು ಸದಸ್ಯರು

ಗ್ರಾಮ ಸಭಾದ ಸಾಮಾನ್ಯ ಸಭೆಗೆ ಕೋರಂ ಗ್ರಾಮಸಭಾದಲ್ಲಿರುವ ಮತದಾರರ ಒಟ್ಟು ಸಂಖ್ಯೆ ಹತ್ತನೇ ಒಂದು ಭಾಗದಷ್ಟು ಮತದಾರರು ಅಥವಾ ನೂರು ಸದಸ್ಯರು, ಇವುಗಳಲ್ಲಿ ಯಾವುದು ಕಡಿಮೆಯೊ ಅಷ್ಟಕ್ಕಿಂತ ಕಡಿಮೆ ಇರಕ್ಕದಲ್ಲ. ಕೋರಂ ಇಲ್ಲದ ವೇಳೆ ಅಧ್ಯಕ್ಷರು ಮೂವತ್ತು ನಿಮಿಷಗಳ ಕಾಲ ಸಭೆಯನ್ನು ಮುಂದೂಡುವುದು. ಆಗಲೂ ಇಲ್ಲವಾದರೆ ಸಾರ್ವಜನಿಕ ರಜಾದಿನವಲ್ಲದ ಮುಂದಿನ ದಿನಕ್ಕೆ ಅಥವಾ ಇತರೆ ದಿನಕ್ಕೆ ಮುಂದೂಡುವುದು.ಅಂತಹ ಸಭೆಗೆ ಕೋರಂ ಅಗತ್ಯ ಇರತಕ್ಕದಲ್ಲ. ಪಂಚಾಯತಿಯ ಪ್ರತಿ ವಾರ್ಡ್ ನಿಂದ ಕನಿಷ್ಠ ಹತ್ತು ಮಂದಿ ಮತ್ತು ಶೇ ಮೂವತ್ತಕ್ಕಿಂತ ಕಡಿಮೆ ಇಲ್ಲದಷ್ಟು ಮಹಿಳೆಯರು ಭಾಗವಹಿಸಬೇಕು.ಅನುಚೂತಿ ಪಂಗಡ ಮತ್ತು ಜಾತಿಯವರು ಅವರವರ ಜನಸಂಖ್ಯೆ ಅನುಗುಣವಾಗಿ ಭಾಗವಹಿಸಿರತಕ್ಕದ್ದು. [ಗಮನಿಸಿ: ಜನವಸತಿ ಮತ್ತು ವಾರ್ಡ್ ಸಭಾಗೆ ಕೋರಂ ಒಟ್ಟು ಮತದಾರರ ಪೈಕಿ ಕನಿಷ್ಠ ಐದನೇ ಒಂದರಷ್ಟು ಸದಸ್ಯರು ಅಥವಾ ಇಪ್ಪತ್ತು ಸದಸ್ಯರು ಇವುಗಳಲ್ಲಿ ಯಾವುದು ಕಡಿಮೆಯೋ ಅದು ಕೋರಂ ಆಗಿರತಕ್ಕದ್ದು. ಅಂದರೆ ಜನವಸತಿ ಮತ್ತು ವಾರ್ಡ್ ಸಭೆಗೆ ಒಂದೇ ಕೋರಂ ನಿರ್ದಿಷ್ಟಪಡಿಸಲಾಗಿದೆ].

65. ಈ ಕೆಳಗಿನ ಯಾವ ಪ್ರಕರಣದಡಿ ಗ್ರಾಮ ಪಂಚಾಯತಿ ಸದಸ್ಯರಾಗಲು ಅನರ್ಹತೆ ಬಗ್ಗೆ ತಿಳಿಸಲಾಗಿದೆ?

ಅ) ಪ್ರಕರಣ 10

ಆ) ಪ್ರಕರಣ 11

ಇ) ಪ್ರಕರಣ 12

ಈ) ಪ್ರಕರಣ 13

ಪ್ರಕರಣ 12

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ಅಧ್ಯಾಯ III (ಗ್ರಾಮ ಪಂಚಾಯತಿ ಮತ್ತು ಸ್ಥಾಯಿ ಸಮಿತಿ ರಚನೆ)ರಡಿ ಪ್ರಕರಣ 12 ರಲ್ಲಿ ಗ್ರಾಮ ಪಂಚಾಯತಿ ಸದಸ್ಯರಾಗಲು ಅನರ್ಹತೆ ಬಗ್ಗೆ ತಿಳಿಸಲಾಗಿದೆ. ಪ್ರಕರಣ 11 ಸದಸ್ಯರಾಗಲು ಅರ್ಹತೆ ಬಗ್ಗೆ ಹೇಳಲಾಗಿದೆ.2015ರಲ್ಲಿ ಪ್ರಕರಣ 12ಕ್ಕೆ ತಿದ್ದುಪಡಿ ತರಲಾಗಿದ್ದು "ಎಲ್" ಖಂಡವನ್ನು ಹೊಸದಾಗಿ ಸೇರಿಸಲಾಗಿದೆ. ಸದಸ್ಯನು ತನ್ನ ಅವಧಿಯಲ್ಲಿ ಪಂಚಾಯತ್ ಅಧಿನಿಯಮ ಅಥವಾ ಇತರ ಆಸ್ತಿಗಳ ದುರುಪಯೋಗ ಅಥವಾ ಪಂಚಾಯತ್ ನ ಯಾವುದೇ ಕಾರ್ಯಕ್ರಮವನ್ನು, ಯೋಜನೆಯನ್ನು ಜಾರಿಗೊಳಿಸುವಾವ ಸದಸ್ಯನಾಗಿ ತನ್ನ ಅಧಿಕಾರವನ್ನು ದುರುಪಯೋಗ ಅಥವಾ ದುರ್ಬಳಕೆ ಮಾಡಿಕೊಳ್ಳುವ ಯಾವುದೇ ಕೃತ್ಯದಲ್ಲಿ

www.karunaduexams.com

ಪ್ರತ್ಯಕ್ಷವಾಗಿ ಭಾಗಿಯಾಗಿ ತಪ್ಪಿತಸ್ಥನೆಂದು ಕಂಡುಬಂದರೆ ಎಂಬ ಅಂಶವನ್ನು ಸೇರ್ಪಡೆಗೊಳಿಸಲಾಗಿದೆ.

66. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ 15 ರಿಂದ 23 ವರೆಗಿನ ಪ್ರಕರಣಗಳಿಗೆ ತಿದ್ದುಪಡಿ ತಂದು ಸಿವಿಲ್ ನ್ಯಾಯಾಧೀಶ ಎಂಬ ಪದಗಳ ಬದಲಾಗಿ ಯಾವ ಪದಗಳನ್ನು ಬಳಸಲಾಗಿದೆ?

ಅ) ಉಚ್ಚ ನ್ಯಾಯಾಲಯ

ಆ) ಗೊತ್ತುಪಡಿಸಿದ ನ್ಯಾಯಾಲಯ

ಇ) ಸರ್ವೋಚ್ಚ ನ್ಯಾಯಾಲಯ

ಈ) ಒಂಬುಡ್ಸ್‌ಮನ್ ನ್ಯಾಯಾಲಯ

ಗೊತ್ತುಪಡಿಸಿದ ನ್ಯಾಯಾಲಯ

ಮೂಲ ಅಧಿನಿಯಮದ 15 ರಿಂದ 23 ವರೆಗಿನ ಪ್ರಕರಣಗಳಿಗೆ ತಿದ್ದುಪಡಿ ತರುವ ಮೂಲಕ ಸಿವಿಲ್ ನ್ಯಾಯಾಧೀಶ ಎಂಬ ಪದಗಳ ಬದಲಿಗೆ ಗೊತ್ತುಪಡಿಸಿದ ನ್ಯಾಯಾಲಯ ಎಂಬ ಪದಗಳನ್ನು ಬಳಸಲಾಗಿದೆ. ಪ್ರಕರಣ 24ಕ್ಕೂ ತಿದ್ದುಪಡಿ ತರಲಾಗಿದ್ದು, ಪ್ರಕರಣ 24ಎ ಅಳವಡಿಸಿ 2015 ಅಧಿನಿಯಮ ಜಾರಿಗೆ ಬರುವ ಮುನ್ನ ಚುನಾವಣೆ ವಿವಾದಗಳಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದಲ್ಲಿರುವ ಎಲ್ಲಾ ಪ್ರಕರಣಗಳನ್ನು "ಗೊತ್ತುಪಡಿಸಿದ ನ್ಯಾಯಾಲಯಕ್ಕೆ" ವರ್ಗಾಯಿಸಬೇಕಿದೆ.

67. ಯಾವುದೇ ಸದಸ್ಯನು ಒಂದಾದಾ ಮೇಲೋಂದರಂತೆ ಆದ ಎಷ್ಟು ಸಭೆಗಳಿಗೆ ಹಾಜರಾಗಲು ತಪ್ಪಿದ್ದರೆ ಸದಸ್ಯತ್ವನ್ನು ರದ್ದುಪಡಿಸಬಹುದಾಗಿದೆ?

ಅ) ಎರಡು

ಆ) ಮೂರು

ಇ) ನಾಲ್ಕು

ಈ) ಐದು

ನಾಲ್ಕು

ಮೂಲ ಅಧಿನಿಯಮ 1993ರ ಪ್ರಕರಣ 43ಎ (ದುರ್ನಡೆತೆಗೆ ಸದಸ್ಯರನ್ನು ತೆಗೆದು ಹಾಕುವುದು) ತಿದ್ದುಪಡಿ ಮಾಡಲಾಗಿದೆ [ಪ್ರಶ್ನೆ: ಯಾವ ಪ್ರಕರಣದಡಿ ಸದಸ್ಯರನ್ನು ದುರ್ನಡೆತೆ ಮೇರೆಗೆ ತೆಗೆದು ಹಾಕಬಹುದು? ಉ: 43ಎ]. ಅದರಂತೆ ಪಂಚಾಯತಿಯ ನಾಲ್ಕು ಒಂದಾದ ಮೇಲೊಂದರಂತೆ ಆದ ಸಭೆಗಳಿಗೆ ಹಾಜರಾಗಲು ತಪ್ಪಿದ್ದರೆ ಸದಸ್ಯತ್ವದಿಂದ ತೆಗೆದು ಹಾಕಬಹುದು. [ಗಮನಿಸಿ: ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸಭೆಯನ್ನು ಕರೆಯಬೇಕಿದ್ದಾಗ ಅಥವಾ ಅಗತ್ಯವಾಗಿದ್ದಾಗ ಒಂದಾದ ಮೇಲೊಂದರಂತೆ ಎರಡು (2) ಸಭೆಗಳನ್ನು ಕರೆಯಲು ತಪ್ಪಿದ್ದಾನೆಂದಾದರೆ ತೆಗೆದುಹಾಕಬಹುದು]

68. ಯಾವ ಪ್ರಕರಣದಡಿ ಗ್ರಾಮ ಪಂಚಾಯತಿಯ ಸದಸ್ಯರು ತಮ್ಮ ಆಸ್ತಿಗಳ ಮತ್ತು ಹೊಣೆಗಾರಿಕೆಯನ್ನು ಘೋಷಣೆ ಮಾಡುವುದು ಕಡ್ಡಾಯವಾಗಿದೆ?

ಅ) ಪ್ರಕರಣ 43

ಆ) ಪ್ರಕರಣ 43 ಎ

ಇ) ಪ್ರಕರಣ 43 ಬಿ

ಈ) ಪ್ರಕರಣ 44

ಪ್ರಕರಣ 43 ಬಿ

ಗಮನಿಸಿ: ಪ್ರಕರಣ 43 ಬಿಯನ್ನು 2015ರ ತಿದ್ದುಪಡಿ ಸಂದರ್ಭದಲ್ಲಿ ಹೊಸದಾಗಿ ಸೇರಿಸಲಾಗಿದೆ. ಈ ಪ್ರಕರಣದಡಿ ಪ್ರತಿಯೊಬ್ಬ ಸದಸ್ಯನು ತಾನು ಮತ್ತು ತನ್ನ ಅವಿಭಕ್ತ ಕುಟುಂಬದ ಎಲ್ಲ ಸದಸ್ಯರು ಎರಡು ಲಕ್ಷಕ್ಕಿಂತ [ಪ್ರಶ್ನೆ: ಎಷ್ಟು ಲಕ್ಷಕ್ಕಿಂತ?] ಹೆಚ್ಚಿನ ಚರ ಮತ್ತು ಸ್ಥಿರ ಆಸ್ತಿಯನ್ನು ಮತ್ತು ಹೊಣೆಗಾರಿಕೆಯನ್ನು ಹೊಂದಿರುವ ಬಗ್ಗೆ ರಾಜ್ಯ ಚುನಾವಣಾ ಆಯೋಗದ ಮುಂದೆ ನಿಯಮಿಸಬಹುದಾದಂಥ ನಮೂನೆಯಲ್ಲಿ ತನ್ನ ಪದಾವಧಿ ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳೊಳಗೆ ಮತ್ತು ಅವನ ಅಧಿಕಾರವದಿ ಮುಗಿಯುವ ತನಕ ಮತ್ತು ಪ್ರತಿ ಆರ್ಥಿಕ ವರ್ಷ ಮುಕ್ತಾಯವಾದ ಒಂದು ತಿಂಗಳೊಳಗೆ ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮೂಲಕ ದಾಖಲು ಮಾಡತಕ್ಕದ್ದು. ಪಿಡಿಓ ಘೋಷಿಸಲಾದ ದಾಖಲೆಗಳನ್ನು ಆ ವರ್ಷದ ಮೇ ಮೊದಲ ವಾರದಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು.ತಡವಾದಲ್ಲಿ ಜುಲೈ ಮೊದಲನೆ ವಾರದಲ್ಲಿ ಸಲ್ಲಿಸಬೇಕು.ಸದಸ್ಯನು ನಿಗದಿತ ಅವಧಿಯೊಳಗೆ ಘೋಷಣೆ ಮಾಡದಿದ್ದಲ್ಲಿ ಅಥವಾ ಸುಳ್ಳು ಮಾಹಿತಿ ನೀಡಿದ್ದಲ್ಲಿ ಚುನಾವಣಾ ಆಯೋಗ ಸದಸ್ಯತ್ವನ್ನು ರದ್ದುಪಡಿಸಬಹುದಾಗಿದೆ.

69. ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ವಿರುದ್ದ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಲು ಬೇಕಾಗಿರುವ ಕೋರಂ ____?

ಅ) ಒಟ್ಟು ಸದಸ್ಯರ ಮೂರನೇ-ಎರಡರಷ್ಟಕ್ಕಿಂತ ಕಡಿಮೆಯಿಲ್ಲದಷ್ಟು

ಆ) ಒಟ್ಟು ಸದಸ್ಯರ ಅರ್ಧಕ್ಕಿಂತ ಕಡಿಮೆಯಿಲ್ಲದಷ್ಟು

ಇ) ಒಟ್ಟು ಸದಸ್ಯರ ಮೂರನೇ-ಒಂದರಷ್ಟಕ್ಕಿಂತ ಕಡಿಮೆಯಿಲ್ಲದಷ್ಟು

ಈ) ಮೇಲಿನ ಯಾವುದು ಅಲ್ಲ

ಒಟ್ಟು ಸದಸ್ಯರ ಅರ್ಧಕ್ಕಿಂತ ಕಡಿಮೆಯಿಲ್ಲದಷ್ಟು

Please Note this: ಮೂಲ ಅಧಿನಿಯಮದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ವಿರುದ್ದ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಕರೆದ ಸಭೆಯಲ್ಲಿ ಗ್ರಾಮ ಪಂಚಾಯತಿಯ ಒಟ್ಟು ಸದಸ್ಯರ ಸಂಖ್ಯೆಯ ಮೂರನೇ-ಎರಡರಷ್ಟಕ್ಕಿಂತ ಕಡಿಮೆ



www.karunaduexams.com

ಇಲ್ಲದಷ್ಟು ಬಹುಮತದಿಂದ ಅಂಗೀಕರಸಿದರೆ ತಕ್ಷಣವೇ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನವನ್ನು ತೆರವುಗೊಳಿಸಬೇಕಿತ್ತು. ಆದರೆ 2015ರ ತಿದ್ದುಪಡಿ ಪ್ರಕಾರ ಮೂರನೇ-ಎರಡರಷ್ಟಕ್ಕಿಂತ ಬದಲಿಗೆ **ಅರ್ಧಕ್ಕಿಂತ** ಎಂದು ಸೇರಿಸಲಾಗಿದೆ.

70. ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಯ ಉದ್ದೇಶಕ್ಕಾಗಿ ಕರೆಯಲಾದ ಸಭೆಯು ಕೋರಂ ಇಲ್ಲದ ಕಾರಣ ಮುಂದಾಡಲಾಗಿದ್ದು, ಮುಂದೂಡಿದ ಎರಡನೇ ದಿನದಲ್ಲಿ _____?

ಅ) ಕೋರಂ ಇದ್ದರೆ ಮಾತ್ರ ಚುನಾವಣೆ ನಡೆಸಬೇಕು

ಆ) ಕೋರಂ ಸಿಗುವ ತನಕ ಮುಂದೂಡಬೇಕು

ಇ) ಚುನಾವಣೆ ನಡೆಸಬಹುದು, ಇದಕ್ಕೆ ಕೋರಂ ಅಗತ್ಯವಿಲ್ಲ

ಈ) ಜಿಲ್ಲಾಧಿಕಾರಿಗಳ ತೀರ್ಪಿಗೆ ಬದ್ದರಾಗಿರತಕ್ಕದ್ದು

ಚುನಾವಣೆ ನಡೆಸಬಹುದು, ಇದಕ್ಕೆ ಕೋರಂ ಅಗತ್ಯವಿಲ್ಲ

ಪ್ರಕರಣ 53ರಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಯ ಉದ್ದೇಶಕ್ಕಾಗಿ ಕರೆದ ಯಾವುದೇ ಸಭೆಯಲ್ಲಿ ಸಭೆಗೆ ಗೊತ್ತುಪಡಿಸಿದ ಸಮಯದಲ್ಲಿ ಕೋರಂ ಇಲ್ಲದಿದ್ದರೆ, ಅಧ್ಯಕ್ಷತೆ ವಹಿಸುವ ವ್ಯಕ್ತಿಯು ಮೂವತ್ತು ನಿಮಿಷಗಳ ತನಕ ಕಾಯತಕ್ಕದ್ದು ಮತ್ತು ಅಂಥ ಸಮಯದಲ್ಲಿ ಕೋರಂ ಇಲ್ಲದಿದ್ದರೆ, ಸಾರ್ವಜನಿಕ ರಜೆ ದಿನ ಅಲ್ಲದ ಕೆಲಸದ ದಿನದಂದು ಅಂಥ ಸಮಯಕ್ಕೇ ಸಭೆಯನ್ನು ಆತನು/ಆಕೆಯ ಮುಂದೂಡಬಹುದು ಮತ್ತು ಮುಂದೂಡಿದ ಎರಡನೇ ದಿನವೂ ಕೋರಂ ಇರದಿದ್ದರೆ, ಚುನಾವಣೆಯನ್ನು ನಡೆಸತಕ್ಕದ್ದು, ಇದಕ್ಕೆ ಕೋರಂ ಅಗತ್ಯ ಇರತಕ್ಕದ್ದಲ್ಲ.

71. ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗದಿರುವುದನ್ನು ಗುರುತಿಸಿ:

ಅ) ಪ್ರಕರಣ 58ಬಿ- ಮಾನವ ಘನತೆಗೆ ಕಳಂಕ ತರುವ ಪದ್ದತಿಗಳನ್ನು ಪ್ರತಿಬಂಧಿಸುವುದು ನಿಷೇಧಿಸುವುದು

ಆ) ಪ್ರಕರಣ 58ಸಿ- ಜೀತ ಪದ್ದತಿಯನ್ನು ನಿರ್ಮೂಲನೆಗೊಳಿಸುವುದು

ಇ) ಪ್ರಕರಣ 58ಡಿ- ಗ್ರಾಮ ಪಂಚಾಯತಿ ಸ್ವತ್ತನ್ನು ಪುನಃ ಸ್ವಾಧೀನ ಪಡೆಯುವುದು

ಈ) ಪ್ರಕರಣ 58ಎಫ್- ಅಪಾಯಕಾರಿ ಕಲ್ಲುಗಣಿಕಾರಿಕೆ ನಿಷೇಧ

ಪ್ರಕರಣ 58ಸಿ- ಜೀತ ಪದ್ದತಿಯನ್ನು ನಿರ್ಮೂಲನೆಗೊಳಿಸುವುದು

ಮೂಲ ಅಧಿನಿಯಮದ ಪ್ರಕರಣ 58ಕ್ಕೆ ತಿದ್ದುಪಡಿ ತಂದು ಪ್ರಕರಣ 58ರಡಿ ಹೊಸದಾಗಿ 58ಬಿ, 58ಸಿ, 58ಡಿ, 58ಇ ಮತ್ತು 58ಎಫ್ ಪ್ರಕರಣಗಳನ್ನು ಹೊಸದಾಗಿ ಸೇರಿಸಲಾಗಿದೆ.ಮೂಲ ಅಧಿನಿಯಮದ ಪ್ರಕರಣ 58-ಎ ಜೀತಗಾರಿಕೆ ಪದ್ದತಿ ಸಂಬಂಧ ವರದಿ ಸಲ್ಲಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರುತ್ತದೆ. 58ಬಿ ಮಾನವ ಘನತೆಗೆ ಕಳಂಕ ತರುವ ಪಾರಂಪರಿಕ, ಸಾಮಾಜಿಕ ಮತ್ತು ಧಾರ್ಮಿಕ ಪದ್ದತಿಗಳನ್ನು ಪ್ರತಿಬಂಧಿಸುವುದು ಗ್ರಾಮ ಪಂಚಾಯತಿಯ

www.karunadueexams.com

ಕರ್ತವ್ಯ. 58ಸಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ತಡೆಯುವುದು ಗ್ರಾಮಪಂಚಾಯತಿ ಕರ್ತವ್ಯ. 58ಡಿ ಕಂದಾಯ ಭೂಮಿಯನ್ನು ಹೊರತುಪಡಿಸಿ ಒತ್ತುವರಿ ಮಾಡಿಕೊಂಡ ಗ್ರಾಮಪಂಚಾಯತಿ ಸ್ವತ್ತನ್ನು ಪುನಃ ಸ್ವಾಧೀನ ಪಡೆಯುವುದು ಪಂಚಾಯತಿ ಕರ್ತವ್ಯ. 58 ಎಫ್ ಅಪಾಯಕಾರಿ ಕಲ್ಲು ಗಣಿಗಾರಿಕೆ, ಕೊಳವೆ ಬಾವಿಗಳನ್ನು,ತೆರೆದ ಬಾವಿಗಳನ್ನು ತೋಡುವುದು ಮತ್ತು ಹೊಂಡಗಳನ್ನು ನಿರ್ಮಿಸುವುದರಿಂದ ಸಾರ್ವಜನಿಕರಿಗೆ ತೊಂದರೆಯಾದರೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳುವುದು ಪಂಚಾಯತಿ ಕರ್ತವ್ಯ. [ಗಮನಿಸಿ ಈ ಮೇಲಿನ ಪ್ರಕರಣಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು]

72. ಈ ಕೆಳಗಿನ ಯಾವ ಪ್ರಕರಣದಡಿ ಸ್ವಚ್ಛ ಪರಿಸರವನ್ನು ಕಾಪಾಡುವುದು ಗ್ರಾಮ ಪಂಚಾಯತಿಯ ಕರ್ತವ್ಯ ಆಗಿದೆ?

ಅ) ಪ್ರಕರಣ 48

ಆ) ಪ್ರಕರಣ 58ಇ

ಇ) ಪ್ರಕರಣ 60ಎ

ಈ) ಪ್ರಕರಣ 58ಎಫ್

ಪ್ರಕರಣ 58ಇ

ಪ್ರಕರಣ 58ಇ ಅನ್ನು ಹೊಸದಾಗಿ ಸೇರ್ಪಡೆಗೊಳಿಸಲಾಗಿದೆ.ಸ್ವಚ್ಛ ಪರಿಸರವನ್ನು ಕಾಪಾಡುವುದು ಗ್ರಾಮ ಪಂಚಾಯತಿಯ ಪ್ರಮುಖ ಕರ್ತವ್ಯವಾಗಿದೆ. ಸ್ವಚ್ಛ ಪರಿಸರ ಕಾಪಾಡುವ ಸಲುವಾಗಿ ಬಯಲು ಬಹಿರ್ದೆಸೆ ಮುಕ್ತಗೊಳಿಸಿ ಮತ್ತು ತ್ಯಾಜ್ಯ ಮುಕ್ತವಾದ ಸ್ವಚ್ಛ ಪರಿಸರವನ್ನು ಉಂಟುಮಾಡುವುದು ಪಂಚಾಯತಿ ಕರ್ತವ್ಯವಾಗಿದೆ.

73. ಗ್ರಾಮ ಪಂಚಾಯತಿಯಲ್ಲಿ ಯಾವುದೇ ಕಾಮಗಾರಿಗಳ ನಿರ್ವಹಣೆ ಅಥವಾ ಸರಕು ಅಥವಾ ಸೇವೆಗಳ ನಿರ್ವಹಣೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ_______ರ ಉಪಬಂಧಗಳೊಂದಿಗೆ ಅನುಸಾರವಾಗಿರತಕ್ಕದ್ದು?

ಅ) 1967

ಆ) 1973

ಇ) 1999

ಈ) 2001

ಪಂಚಾಯತ್ ಅಧಿನಿಯಮ 60ಕ್ಕೆ ತಿದ್ದುಪಡಿ ತರಲಾಗಿದ್ದು 60ಎ ಮತ್ತು 60ಬಿ ಪ್ರಕರಣಗಳನ್ನು ಸೇರ್ಪಡೆಗೊಳಿಸಲಾಗಿದೆ. ಪ್ರಕರಣ 60ಎ ಪ್ರಕಾರ ಗ್ರಾಮ ಪಂಚಾಯತಿಯಲ್ಲಿ ಯಾವುದೇ ಕಾಮಗಾರಿಗಳ ನಿರ್ವಹಣೆ ಅಥವಾ ಸರಕು ಅಥವಾ ಸೇವೆಗಳ

www.karunaduexams.com

ನಿರ್ವಹಣೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999ರ ಉಪಬಂಧಗಳೊಂದಿಗೆ ಅನುಸಾರವಾಗಿರತಕ್ಕದ್ದು.

74. ಗ್ರಾಮ ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಯನ್ನು ಪಂಚಾಯತ್ ರಾಜ್ ಅಧಿನಿಯಮದ ಯಾವ ಅಧ್ಯಾಯನದಡಿ ಉಲ್ಲೇಖಿಸಲಾಗಿದೆ?

ಅ) ಅಧ್ಯಾಯ III

ಆ) ಅಧ್ಯಾಯ IV

ಇ) ಅಧ್ಯಾಯ IVಎ

ಈ) ಅಧ್ಯಾಯ V

ಅಧ್ಯಾಯ IVಎ

ಪಂಚಾಯತ್ ರಾಜ್ ಅಧಿನಿಯಮಕ್ಕೆ ಅಧ್ಯಾಯ IV ಕ್ಕೆ ತಿದ್ದುಪಡಿತರಲಾಗಿದ್ದು, ಅಧ್ಯಾಯ IVಎ ಸೇರ್ಪಡೆಗೊಳಿಸಲಾಗಿದೆ.ಇದರಡಿ ಗ್ರಾಮ ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಯನ್ನು ವಿವರಿಸಲಾಗಿದೆ.

75. ಗ್ರಾಮ ಪಂಚಾಯತಿಯಲ್ಲಿ ಪ್ರತಿ ಎಷ್ಟು ವರ್ಷಗಳಿಗೊಮ್ಮೆ ತೆರಿಗೆ ಪರಿಷ್ಕರಣೆಯನ್ನು ಮಾಡುವುದು ಕಡ್ಡಾಯ?

ಅ) ಮೂರು ವರ್ಷ

ಆ) ಎರಡು ವರ್ಷ

ಇ) ಐದು ವರ್ಷ

ಈ) ಆರು ವರ್ಷ

ಎರಡು ವರ್ಷ

ಗ್ರಾಮ ಪಂಚಾಯತಿಯಲ್ಲಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ತೆರಿಗೆ ಪರಿಷ್ಕರಣೆಯನ್ನು ಮಾಡುವುದು ಕಡ್ಡಾಯವಾಗಿದೆ.ಪರಿಷ್ಕರಣೆ ಮೇಲೇ ಶೇ10% ತೆರಿಗೆಯನ್ನು ಹೆಚ್ಚಿಸಬಹುದು.

76. ಯಾವುದೇ ವ್ಯಕ್ತಿ ಗ್ರಾಮ ಪಂಚಾಯತಿ ಪ್ರದೇಶದೊಳಗೆ ನಿಷೇಧಿತ ಕೆಲಸವನ್ನು ಮಾಡಿ ಸಾಬೀತಾದರೆ ಎಷ್ಟು ರೂ ವರೆಗೆ ಜುಲ್ಮಾನೆ ವಿಧಿಸುವುದು?

ಅ) ರೂ 100

ಆ) ರೂ 200

ಇ) ರೂ 400

ಈ) ರೂ 500

ರೂ 500

www.karunaduexams.com

ಪಂಚಾಯತ್ ರಾಜ್ ಪ್ರಕರಣ 110ರಡಿ ಗ್ರಾಮ ಪಂಚಾಯತಿಯಲ್ಲಿ ನಿಷೇಧಿತ ಕೆಲಸಗಳನ್ನು ಮಾಡಿ ಸಾಬೀತಾದರೆ ಮೂಲ ಅಧಿನಿಯಮದಲ್ಲಿ ರೂ 100 ದಂಡ ವಿಧಿಸಬಹುದಾಗಿತ್ತು.2015ರಲ್ಲಿ ಈ ಪ್ರಕರಣಕ್ಕೆ ತಿದ್ದುಪಡಿ ತರಲಾಗಿದ್ದು, ಒಂದು ನೂರು ರೂಪಾಯಿ ಬದಲಿಗೆ ಗ್ರಾಮ ಪಂಚಾಯತಿಗೆ ರೂ ಐದು ನೂರು ರೂಪಾಯಿಗಳ ಆಡಳಿತಾತ್ಮಕ ವೆಚ್ಚವನ್ನು ಸಂದಾಯ ಮಾಡತಕ್ಕದ್ದು.

77. ಈ ಕೆಳಗಿನ ಯಾರ ಅಧ್ಯಕ್ಷತೆಯಲ್ಲಿ "ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ" ಸಮಿತಿಯನ್ನು ರಚಿಸಲಾಗಿತ್ತು?

ಅ) ನಂಜಯ್ಯನ ಮಠ

ಆ) ಕೆ. ಆರ್.ರಮೇಶ್ ಕುಮಾರ್

ಇ) ಹೆಚ್.ಕೆ.ಪಾಟೀಲ್

ಈ) ವಿಜಯ ಭಾಸ್ಕರ್

ಕೆ. ಆರ್.ರಮೇಶ್ ಕುಮಾರ್

ಅಂದಿನ ವಿಧಾನಸಭಾ ಸದಸ್ಯರಾದ ಹಾಗೂ ಪ್ರಸ್ತುತ ರಾಜ್ಯ ಆರೋಗ್ಯ ಸಚಿವರಾಗಿರುವ ಶ್ರೀ ಕೆ.ಆರ್.ರಮೇಶ್ ಕುಮಾರ್ ಅಧ್ಯಕ್ಷತೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ" ಸಮಿತಿಯನ್ನು ರಚಿಸಿಲಾಗಿತ್ತು.ಈ ಸಮಿತಿ ನೀಡಿದ ಬಹುತೇಕ ಶಿಫಾರಸ್ಸುಗಳನ್ನು ಪರಿಗಣಿಸಿ ಕರ್ನಾಟಕ ಸರ್ಕಾರ "ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ" 1993 ಎಂದು ತಿದ್ದುಪಡಿ ತಂದಿದೆ.

78. ಈ ಕೆಳಗಿನ ಯಾವ ರಾಜ್ಯಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಅಸ್ತಿತ್ವದಲ್ಲಿ ಇಲ್ಲ?

ಅ) ನಾಗಲ್ಯಾಂಡ್, ಅಸ್ಸಾಂ, ಮಿಜೋರಾಂ

ಆ) ಅರುಣಾಚಲ ಪ್ರದೇಶ, ತ್ರಿಪುರ, ಅಸ್ಸಾಂ

ಇ) ನಾಗಲ್ಯಾಂಡ್, ಮೇಘಾಲಯ, ಮಿಜೋರಾಂ

ಈ) ಸಿಕ್ಕಿಂ, ಮಣಿಪುರ, ಮೇಘಾಲಯ

ನಾಗಲ್ಯಾಂಡ್, ಮೇಘಾಲಯ, ಮಿಜೋರಾಂ

ನಾಗಲ್ಯಾಂಡ್, ಮೇಘಾಲಯ, ಮಿಜೋರಾಂ ಈ ಮೂರು ರಾಜ್ಯಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಅಳವಡಿಸಿಕೊಂಡಿಲ್ಲ. ಕೇಂದ್ರಾಡಳಿತ ಪ್ರದೇಶಗಳ ಪೈಕಿ ದೆಹಲಿಯನ್ನು ಹೊರತುಪಡಿಸಿ ಬೇರೆಲ್ಲ ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿಯಲ್ಲಿದೆ.

79. ಬಸವ ವಸತಿ ಯೋಜನೆಯಡಿ ಮನೆ ನಿರ್ಮಾಣಕ್ಕೆ ವೆಚ್ಚವನ್ನು ಗರಿಷ್ಠ ರೂ_____ ಲಕ್ಷಗಳವರೆಗೆ ಮಾತ್ರ ಅವಕಾಶ ನೀಡಲಾಗಿದೆ?

ಅ) ರೂ 2,00,000 ಲಕ್ಷ

www.karunaduexams.com

ಆ) ರೂ 3,00,000 ಲಕ್ಷ

ಇ) ರೂ 4,00,000 ಲಕ್ಷ

ಈ) ರೂ 5,00,000 ಲಕ್ಷ

ರೂ 5,00,000 ಲಕ್ಷ

ಬಸವ ವಸತಿ ಯೋಜನೆಯಡಿ ಮನೆಯನ್ನು ಗರಿಷ್ಠ ರೂ 5 ಲಕ್ಷಗಳವರೆಗೆ ಮಾತ್ರ ಅವಕಾಶ ನೀಡಲಾಗಿದೆ. ಇಂದಿರಾ ಆವಾಸ್ ಯೋಜನೆಯಡಿ ಮನೆಯನ್ನು ಗರಿಷ್ಠ ರೂ 4.8 ಲಕ್ಷಗಳವರೆಗೆ ಮಾತ್ರ ಅವಕಾಶ ನೀಡಲಾಗಿದೆ. [ಗಮನಿಸಿ: ಮನೆಯನ್ನು ಕನಿಷ್ಠ 250 ಚದರಡಿ ಗರಿಷ್ಠ 700 ಚದರಡಿಯೊಳಗೆ ನಿರ್ಮಿಸಬೇಕು].

80. ಕರ್ನಾಟಕದಲ್ಲಿ ಗ್ರಾಮ ಪಂಚಾಯತಿವಾರು ಮಾನವ ಅಭಿವೃದ್ದಿ ಸೂಚ್ಯಂಕ ವರದಿಯನ್ನು ಹೊರ ತಂದ ಸಂಸ್ಥೆ _____?

ಅ) ಗ್ರಾಮೀಣಾಭಿವೃದ್ದಿ ಮಂತ್ರಾಲಯ

ಆ) ಎಸ್ಐಆರ್ ಡಿ

ಇ) ಅಂಕಿ-ಅಂಶ ಇಲಾಖೆ

ಈ) ಕೇಂದ್ರ ಗೃಹ ಸಚಿವಾಲಯ

ಎಸ್ಐಆರ್ ಡಿ

ಮೈಸೂರಿನಲ್ಲಿರುವ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಭಿವೃದ್ದಿ ಮತ್ತು ಪಂಚಾಯತ್ ರಾಜ್ ಸಂಸ್ಥೆ (ಎಸ್ಐಆರ್ ಡಿ) ಹೊರತಂದಿದೆ.ಈ ವರದಿಯನ್ನು ಆಧರಿಸಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಭಿವೃದ್ದಿ ಕಾರ್ಯಕ್ರಮಗಳನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳಲು ಸಾಧ್ಯವಾಗಲಿದೆ.

81. ಅಂದಿನ ಮೈಸೂರು ಸರ್ಕಾರ ಜಾರಿಗೆ ತಂದ "ದಿ ಮೈಸೂರು ಲೋಕಲ್ ಬೋರ್ಡ್ ರೆಗ್ಯುಲೇಷನ್" ಕಾಯಿದೆಯಡಿ ಎಷ್ಟು ಹಂತದ ಸ್ಥಳೀಯಾಡಳಿತ ವ್ಯವಸ್ಥೆ ಜಾರಿಗೆ ಬಂದಿತು?

ಅ) ಒಂದು ಹಂತ

ಆ) ಎರಡು ಹಂತ

ಇ) ಮೂರು ಹಂತ

ಈ) ಐದು ಹಂತ

ಮೂರು ಹಂತ

ಅಂದಿನ ಮೈಸೂರು ಸರ್ಕಾರ ಜಾರಿಗೆ ತಂದ "ದಿ ಮೈಸೂರು ಲೋಕಲ್ ಬೋರ್ಡ್ ರೆಗ್ಯುಲೇಷನ್" ಕಾಯಿದೆಯಡಿ ಎಷ್ಟು ಹಂತದ ಸ್ಥಳೀಯಾಡಳಿತ ವ್ಯವಸ್ಥೆ ಜಾರಿಗೆ ತರಲಾಗಿತ್ತು.ಅವುಗಳೆಂದರೆ ಜಿಲ್ಲಾ ಮಂಡಳಿ, ತಾಲ್ಲೂಕ್ ಬೋರ್ಡ್ ಮತ್ತು ಪಂಚಾಯತಿ ಸಂಘಟನೆ.

www.karunaduexams.com

82. ಮೈಸೂರು ರಾಜ್ಯದಲ್ಲಿ ಸ್ಥಳೀಯಾಡಳಿತ ವ್ಯವಸ್ಥೆಯ ಕೊರತೆಯ ಅಧ್ಯಯನ ನಡೆಸಲು "ವೆಂಕಟಪ್ಪ ಸಮಿತಿ"ಯನ್ನ ಯಾವ ವರ್ಷದಲ್ಲಿ ನಡೆಸಲಾಯಿತು?

ಅ) 1948

ಆ) 1949

ಇ) 1953

ಈ) 1962

1949

ಸ್ವಾಂತಂತ್ರ್ಯ ಭಾರತದಲ್ಲಿ ಮೈಸೂರು ರಾಜ್ಯದಲ್ಲಿ ಸ್ಥಳೀಯಾಡಳಿತ ವ್ಯವಸ್ಥೆಯ ಕೊರತೆಯ ಅಧ್ಯಯನ ನಡೆಸಲು "ವೆಂಕಟಪ್ಪ ಸಮಿತಿ"ಯನ್ನ 1949ರ ಸೆಪ್ಟೆಂಬರ್ ತಿಂಗಳಲ್ಲಿ ರಚಿಸಲಾಯಿತು.ಈ ಸಮಿತಿಯು 1950ರ ಜೂನ್ ತಿಂಗಳಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಗ್ರಾಮ ಮಟ್ಟದಲ್ಲಿ ಗ್ರೂಪ್ ಪಂಚಾಯತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಂಡಳಿ ಇರುವ ಎರಡು ಹಂತದ ಸ್ಥಳೀಯಾಡಳಿತ ವ್ಯವಸ್ಥೆ ಜೊತೆಗೆ ತಾಲ್ಲೂಕು ಮಟ್ಟದ ಎಲ್ಲಾ ಗ್ರೂಪ್ ಪಂಚಾಯತಿ ಅಧ್ಯಕ್ಷರನ್ನು ಒಳಗೊಂಡ ಸಮನ್ವಯ ಸಮಿತಿ ರಚನೆಗೆ ವೆಂಕಟಪ್ಪ ಸಮಿತಿ ಶಿಫಾರಸ್ಸು ಮಾಡಿತ್ತು.

83. ಅಶೋಕ್ ಮೆಹ್ತಾ ಸಮಿತಿಯನ್ನು ರಚಿಸಿದ ವೇಳೆ ಭಾರತದ ಪ್ರಧಾನಿಯಾಗಿದ್ದವರು ಯಾರು?

ಅ) ಇಂದಿರಾ ಗಾಂಧಿ

ಆ) ರಾಜೀವ್ ಗಾಂಧಿ

ಇ) ಮೊರಾರ್ಜಿ ದೇಸಾಯಿ

ಈ) ಪಿ ವಿ ನರಸಿಂಹರಾವ್

ಮೊರಾರ್ಜಿ ದೇಸಾಯಿ

1977 ರಲ್ಲಿ ಅಶೋಕ್ ಮೆಹ್ತಾ ಸಮಿತಿಯನ್ನು ಅಂದಿನ ಪ್ರಧಾನಿ ಮೊರಾರ್ಜಿ ದೇಸಾಯಿ ನೇತೃತ್ವ ಜನತಾ ಸರ್ಕಾರ ನೇಮಕ ಮಾಡಿತು.ಅದು ಪಂಚಾಯತ್ ರಾಜ್ಯ ಸಂಸ್ಥೆಗಳು ಅಸಮರ್ಪಕ ನಿರ್ವಹಣೆಗೆ ಕಾರಣಗಳನ್ನು ಹುಡುಕುವ ಕೆಲಸವನ್ನು ವಹಿಸಲಾಗಿತ್ತು.ಪಂಚಾಯತಿ ರಾಜ್ ಸಂಸ್ಥೆಗಳನ್ನು ಬಲಪಡಿಸಲು ಅವರು ಸಲಹೆಗಳನ್ನು ಪ್ರಸ್ತುತಪಡಿಸಲು ಕೇಳಲಾಯಿತು.ಬಲವಂತರಾವ್' ಮೆಹ್ತಾ ಸಮಿತಿಯ ಮೂರು ಶ್ರೇಣಿ ವ್ಯವಸ್ಥೆಯ ಸಲಹೆ ವಿರುದ್ಧ ಈ ಸಮಿತಿಯು ಪಂಚಾಯತಿ ರಾಜ್‌ದಲ್ಲಿ ಕೇವಲ ಎರಡು ಸಮಿತಿಯ ವ್ಯವಸ್ಥೆಯನ್ನು ಸೂಚಿಸಿತು.ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಮತ್ತು ಗ್ರಾಮ ಮಟ್ಟದಲ್ಲಿ ಮಂಡಲ್ ಪಂಚಾಯತ್ ಒಳಗೊಂಡಿರವ ವ್ಯವಸ್ಥೆಗೆ ಸಲಹೆ

ಮಾಡಿತು.ಸಮಿತಿಯು ಎಲ್ಲಾ ಹಂತಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಾಂವಿಧಾನಿಕ ರಕ್ಷಣೆ ಮತ್ತು ಅಧಿಕಾರದ ಮತ್ತಷ್ಟು ವಿಕೇಂದ್ರೀಕರಣ ಶಿಫಾರಸುಮಾಡಿತು. ಜನತಾ ಸರ್ಕಾರದ ಕುಸಿತದ ಕಾರಣ ಅಶೋಕ್ ಮೆಹ್ತಾ ಸಮಿತಿಯ ಶಿಫಾರಸುಗಳು ಅಳವಡಿಸಿಕೊಳ್ಳಲು ಆಗಲಿಲ್ಲ. ಕರ್ನಾಟಕವೂ ಸೇರಿ ಕೆಲವು ರಾಜ್ಯಗಳಲ್ಲಿ ಈ ಸಮಿತಿಯ ಶಿಫಾರಸುಗಳನ್ನು ರಾಜ್ಯ ಶಾಸನದ ಆಧಾರದ ಮೇಲೆ ರೂಪಿಸಲಾಗಿತ್ತು.

84. ಈ ಕೆಳಗಿನ ಯಾವ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಸಂವಿಧಾನದ 73ನೇ ತಿದ್ದುಪಡಿಯನ್ನು ಜಾರಿಗೆ ತರಲಾಗಿದೆ?

ಅ) ಜಿ ವಿ ಕೆ ರಾವ್ ಸಮಿತಿ

ಆ) ಎಲ್ ಎಂ ಸಿಂಘ್ವಿ ಸಮಿತಿ

ಇ) ಬಲವಂತ್ ರಾಯ್ ಸಮಿತಿ

ಈ) ಅಶೋಕ್ ಮೆಹ್ತ ಸಮಿತಿ

ಎಲ್ ಎಂ ಸಿಂಘ್ವಿ ಸಮಿತಿ

1986 ರಲ್ಲಿರಚಿಸಲಾದ ಡಾಎಲ್.ಎಂ.ಸಿಂಘ್ವಿಸಮಿತಿಯ ಶಿಫಾರಸ್ಸಿನ ಮೇರೆಗೆ ಸಂವಿಧಾನದ 73ನೇತಿದ್ದುಪಡಿಯನ್ನುತರಲಾಗಿದೆ.ಸಿಂಘ್ವಿಸಮಿತಿಯುಪಂಚಾಯತಿರಾಜ್'ಗೆಸಾಂವಿಧಾನಿಕ ವಾಗಿರಕ್ಷಣೆಕೊಡಲುಶಿಫಾರಸುಮಾಡಿತು.ಸಂವಿಧಾನದಲ್ಲಿಹೊಸಅಧ್ಯಾಯವನ್ನುನಿಯಮವ ನ್ನುರೂಪಿಸಲುತಿದ್ದುಪಡಿಮಾಡಬೇಕು.ಅಧಿಕಾರಮತ್ತುಕ್ರಿಯೆಗಳನ್ನುರೂಪಿಸಬೆಕು.ಚುನಾವ ಣಾಆಯೋಗದಮೂಲಕಸಮಿತಿರಚಿಸಲುನ್ಯಾಯಯುತಚುನಾವಣೆನಡೆಸಬೇಕುಎಂಬ ಪ್ರಮುಖ ಶಿಫಾರಸ್ಸುಗಳನ್ನು ಸಮಿತಿ ನೀಡಿದೆ.

85. ಬ್ರಿಟಿಷರ ಕಾಲದಲ್ಲಿ ಸ್ಥಳೀಯ ಸರ್ಕಾರಕ್ಕೆ ಆಡಳಿತಾತ್ಮಕ ರೂಪ ಕೊಡುವ ಸಲುವಾಗಿ ಒಂದು ಜಿಲ್ಲೆಯನ್ನು ಘಟಕವನ್ನಾಗಿಸಲಾಗಿತ್ತು. ಇದಕ್ಕೆ _____ ಎಂದು ಕರೆಯಲಾಗುತ್ತಿತ್ತು?

ಅ) ಲೋಕಲ್ ಫಂಡ್ ಸಮಿತಿ

ಆ) ಲೋಕಲ್ ಡೆವಲಪ್ಮೆಂಟ್ ಸಮಿತಿ

ಇ) ಲೋಕಲ್ ರೂರಲ್ ಸಮಿತಿ

ಈ) ಲೋಕಲ್ ಜನರಲ್ ಸಮಿತಿ

ಲೋಕಲ್ ಫಂಡ್ ಸಮಿತಿ

1884 ರಲ್ಲಿ ಬ್ರಿಟಿಷರ ಕಾಲದಲ್ಲಿ ಸ್ಥಳೀಯ ಸರ್ಕಾರಕ್ಕೆ ಆಡಳಿತಾತ್ಮಕ ರೂಪ ಕೊಡುವ ಪ್ರಯತ್ನ ಮಾಡಲಾಗಿತ್ತು.ಅದರಂತೆ ಒಂದು ಜಿಲ್ಲೆಯನ್ನು ಆಡಳಿತ ಘಟಕವಾಗಿ ರೂಪಿಸಿದರು.ಈ ವ್ಯವಸ್ಥೆಗೆ ಲೋಕಲ್ ಫಂಡ್ ಸಮಿತಿ ಎಂದು ಕರೆಯಲಾಯಿತು.ಈ ಸಮಿತಿಗೆ ಜಿಲ್ಲಾ ಕಮೀಷನರ್ ಅಧ್ಯಕ್ಷರಾಗಿದ್ದರು.ಅಧಿಕಾರಿಗಳು, ಇನಾಂದಾರಾರು ಮತ್ತು ಜನಪ್ರತಿನಿಧಿಗಳು ಸದಸ್ಯರಾಗಿದ್ದರು.

www.karunaduexams.com

86. ಅಂದಿನ ಮೈಸೂರು ಸರ್ಕಾರ "ದಿ ಮೈಸೂರು ಲೋಕಲ್ ಬೋರ್ಡ್ ಮತ್ತು ವಿಲೇಜ್ ಪಂಚಾಯತ್ ಕಾಯಿದೆ"ಯನ್ನು ಜಾರಿಗೆ ತಂದ ವರ್ಷ______?

ಅ) 1916

ಆ) 1914

ಇ) 1919

ಈ) 1920

1919

ಅಂದಿನ ಮೈಸೂರು ಸರ್ಕಾರ 1919ರಲ್ಲಿ ದಿ ಮೈಸೂರು ಲೋಕಲ್ ಬೋರ್ಡ್ ಮತ್ತು ವಿಲೇಜ್ ಪಂಚಾಯತ್ ಕಾಯಿದೆಯನ್ನು ಜಾರಿಗೆ ತಂದಿತು.ನಂತರ 1926 ರಲ್ಲಿ ಮತ್ತೊಂದು ಕಾಯಿದೆಯನ್ನು ಜಾರಿಗೆ ತರಲಾಯಿತು.[ಇದರಲ್ಲಿ 21 ವರ್ಷ ದಾಟಿದ ಪುರುಷರಿಗೆ ಮಾತ್ರ ಮತದಾನ ಅವಕಾಶ ಕಲ್ಪಿಸಲಾಗಿತ್ತು].ಚುನಾಯಿತರ ಒಬ್ಬರಲ್ಲಿ ಕಾರ್ಯದರ್ಶಿ ನೇಮಕ ಮಾಡುವ ಅಧಿಕಾರ ಈ ಕಾಯಿದೆ ನೀಡಿತ್ತು.ಅಲ್ಲದೇ ತೆರಿಗೆಗಳ ಪ್ರಮಾಣವನ್ನು ನಿರ್ಧರಿಸಬಹುದಿತ್ತು.1926 ರಲ್ಲಿ ಜಾರಿಗೆ ಬಂದ ಈ ಕಾಯಿದೆ 1952 ರವರೆಗೆ ಅನುಷ್ಠಾನದಲ್ಲಿತ್ತು.

87. ಸಂವಿಧಾನ 73ನೇ ತಿದ್ದುಪಡಿ ಈ ಕೆಳಗಿನ ಯಾವುದಕ್ಕೆ ಅವಕಾಶ ಕಲ್ಪಿಸಿದೆ?

I) ಗ್ರಾಮ ಸಭೆಗೆ ಸಾಂವಿಧಾನಿಕ ಅಸ್ತಿತ್ವ ನೀಡಲಾಗಿದೆ

II) ರಾಜ್ಯ ಹಣಕಾಸು ಆಯೋಗದ ಸ್ಥಾಪನೆ

III) ಜಿಲ್ಲಾ ಯೋಜನಾ ಸಮಿತಿ ಸ್ಥಾಪನೆ

IV) ನೇರ ಚುನಾವಣೆ ಮೂಲಕ ಪ್ರತಿನಿಧಿಗಳ ಆಯ್ಕೆ

ಸರಿಯಾದ ಉತ್ತರಗಳನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಆರಿಸಿ:

ಅ) I & II

ಆ) II & III

ಇ) I, II & III

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

ಕಾಂಗ್ರೆಸ್ ಸರ್ಕಾರದ ಅಡಿಯಲ್ಲಿ ಪ್ರಧಾನಿ ಪಿ ವಿ ನರಸಿಂಹ ರಾವ್'ಅದರಲ್ಲಿ ಸಣ್ಣ ಪುಟ್ಟ ಮಾರ್ಪಾಡುಗಳನ್ನು ಹೊಂದಿರುವ 73 ನೇ ತಿದ್ದುಪಡಿ ಕಾಯ್ದೆಯನ್ನು ಸಂಸತ್ತಿನಲ್ಲಿ ಮಂಡಿಸಿ, 1992 ರಲ್ಲಿ ಸಂಸತ್ತು ಒಪ್ಪಿಗೆ ಪಡೆದರು. ಅದು 24 ಏಪ್ರಿಲ್ 1993 ರಲ್ಲಿ ಜಾರಿಗೆ ಬಂದಿದೆ.

www.karunaduexams.com

**1993 ಕಾಯಿದೆಯ ಪ್ರಮುಖ ಅಂಶಗಳು ಹೀಗೆ ಇವೆ**:

- ಈ ಕಾಯಿದೆಯಂತೆ ಪ್ರತಿ ಗ್ರಾಮಪಂಚಾಯತಿಯಲ್ಲಿ ಗ್ರಾಮ ಸಭಾ ಸ್ಥಾಪನೆಗೆ ಅವಕಾಶ ಒದಗಿಸಲಾಗಿದೆ. ಇದು ಪಂಚಾಯತ್ ಭಾಗದ ಎಲ್ಲಾ ನೋಂದಾಯಿತ ವಯಸ್ಕ ಸದಸ್ಯರನ್ನು ಒಳಗೊಂಡಿದೆ.
- ಮೂರು ಹಂತದ ಆಡಳಿತ: ಅ) ಗ್ರಾಮ ಪಂಚಾಯತ್ ಆ) ಜಿಲ್ಲಾ ಪಂಚಾಯತ್ ಮತ್ತು ಇ) ಮಧ್ಯಂತರ ಮಟ್ಟದಲ್ಲಿ ಒಂದು ಪಂಚಾಯಿತಿ ವ್ಯವಸ್ಥೆ; ಹೀಗೆ ಮೂರು ಹಂತದಲ್ಲಿ ಇರತಕ್ಕದ್ದು. ಸಣ್ಣ ರಾಜ್ಯಗಳು 20 ಲಕ್ಷಕ್ಕೆ ಕಡಿಮೆ ಜನಸಂಖ್ಯೆ ಇದ್ದರೆ ಮಧ್ಯಂತರ ಪಂಚಾಯತ್ ಮಟ್ಟದ ಆಯ್ಕೆಯನ್ನು ಹೊಂದಿರುವುದು ಕಡ್ಡಾಯವಲ್ಲ.
- ಎಲ್ಲಾ ಹಂತದ ಮೂರು ಪಂಚಾಯತ್ ಸ್ಥಾನಗಳನ್ನು ನೇರ ಚುನಾವಣೆಯ ಮೂಲಕ ತುಂಬಬೇಕು. ಇದಕ್ಕೆ ಹೆಚ್ಚುವರಿಯಾಗಿ, ಗ್ರಾಮ ಪಂಚಾಯತ್ ಅಧ್ಯಕ್ಷರಾದವರನ್ನು ಮಧ್ಯಂತರ ಮಟ್ಟದಲ್ಲಿ ಮಾಡಿದ ಪಂಚಾಯತಿಯ ಸದಸ್ಯರನ್ನಾಗಿ ಮಾಡಬಹುದು.
- ಎಲ್ಲಾ ಪಂಚಾಯತ್ ಗಳಲ್ಲಿ ಪರಿಶಿಷ್ಟ ಜಾತಿಗೆ ಸ್ಥಾನಗಳನ್ನು ಕಾಯ್ದಿರಿಸಲಾಗಿದೆ; ಮತ್ತು ಮಹಿಳೆಯರಿಗೆ 1/3 ಅನುಪಾತದಲ್ಲಿ ಸ್ಥಾನಗಳು ಮೀಸಲಾಗಿವೆ (ಕರ್ನಾಟಕದಲ್ಲಿ ಈಗ ಶೇ.50% ಮೀಸಲಾತಿ ನೀಡಲಾಗಿದೆ).ಅವರ ಸಂಖ್ಯೆ ಮತ್ತು ಒಟ್ಟು ಸೀಟುಗಳು 1/3 ಅನುಪಾತದಲ್ಲಿ ಇರಬೇಕು, ರಾಜ್ಯದಲ್ಲಿ ಎಲ್ಲಾ ಹಂತಗಳಲ್ಲಿ ಅವರಿಗೆ ಪಂಚಾಯತ್ ಅಧ್ಯಕ್ಷ ಸ್ಥಾನಗಳಲ್ಲಿ ಮೂರನೇ ಒಂದು ಭಾಗ (ಮಹಿಳೆಯರಿಗೆ) ಮೀಸಲಾತಿ ಕೊಟ್ಟಿದೆ..
- ಪಂಚಾಯತ್ ಏಕರೂಪದಲ್ಲಿ ಐದು ವರ್ಷಗಳ ಅವಧಿಗೆ ಇರುವುದು. ವಿಸರ್ಜನೆಯ ಸಂದರ್ಭದಲ್ಲಿ ಹೊಸ ಮಂಡಳಿಗಳನ್ನು ಚುನಾವಣೆಯ ಮೂಲಕ ಆರು ತಿಂಗಳ [ಎಷ್ಟು ತಿಂಗಳೊಳಗೆ?] ಒಳಗೆ ಕಡ್ಡಾಯವಾಗಿ ಆಯ್ಕೆ ಮಾಡುವುದು. ಪುನಾರಚಿತ ಪಂಚಾಯತ್ ಐದು ವರ್ಷಗಳ ಅವಧಿಯ ಕಾಲ ಕಾರ್ಯ ನಿರ್ವಹಿಸುವರು. ಅವಧಿಯ ಮುಕ್ತಾಯದ ಮೊದಲು ಯಾವುದೇ ಕಾಯಿದೆಯ ತಿದ್ದುಪಡಿಯ ಮೂಲಕ, ಅಸ್ತಿತ್ವದಲ್ಲಿರುವ ಪಂಚಾಯತ್'ನ್ನು ವಿಸರ್ಜಿಸಲು ಸಾಧ್ಯವಾಗುವುದಿಲ್ಲ. .
- ಮೇಲ್ವಿಚಾರಣೆ, ನಿರ್ದೇಶನ, ಮತ್ತು ಚುನಾವಣಾ ಪ್ರಕ್ರಿಯೆಯ ಮತ್ತು ಮತದಾರರ ಅಧಿಕೃತ ಪಟ್ಟಿಗಳ ತಯಾರಿಕೆಗೆ ರಾಜ್ಯದ ಸ್ವತಂತ್ರ ಚುನಾವಣಾ ಆಯೋಗ ಸ್ಥಾಪಿಸಲಾಗುವುದು.
- ನಿರ್ದಿಷ್ಟ ಜವಾಬ್ದಾರಿಗಳನ್ನು ಪಂಚಾಯತ್'ಗಳಿಗೆ ಒಪ್ಪಿಸಲಾಗಿದೆ.
- 11ನೇ ಪಟ್ಟಿ ವಿಷಯಗಳಿಗೆ ಸಂಬಂಧಿಸಿದಂತೆ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಯೋಜನೆಗಳ ವೇಳಾಪಟ್ಟಿ ತಯಾರಿಸುವುದು.
- ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ, ಪಂಚಾಯತ್ 'ಗಳಿಗೆ ಮುಖ್ಯ ಜವಾಬ್ದಾರಿ ಒಪ್ಪಿಸಲಾಯಿತು.

  ಪಂಚಾಯತ್ ತಮ್ಮ ಯೋಜನೆಗಳನ್ನು ನಡೆಸಲು ಸಾಕಷ್ಟು ಹಣವನ್ನು ರಾಜ್ಯ ಸರ್ಕಾರದಿಂದ ಧನಸಹಾಯ ಪಡೆಯುವುವು.
- ಪ್ರತಿ ರಾಜ್ಯದಲ್ಲಿ, ಹಣಕಾಸು ಆಯೋಗವನ್ನು ಒಂದು ವರ್ಷದೊಳಗೆ ಸ್ಥಾಪಿಸುವುದು.

www.karunadueams.com

- ಪಂಚಾಯಿತಿಗಳು ಸಾಕಷ್ಟು ಆರ್ಥಿಕ ಸಂಪನ್ಮೂಲ ಹೊಂದಲು ತತ್ವಗಳ ಆಧಾರದ ಮೇಲೆ ನಿರ್ಧರಿಸಲು,ಪ್ರತಿ ಐದು ವರ್ಷಗಳಿಗೊಮ್ಮೆ ಅದರ ಪುನಸ್ಥಾಪನೆ.

88. ಕರ್ನಾಟಕ ಪಂಚಾಯತ್ ರಾಜ್ ಕಾಯಿದೆಗೆ ಯಾವ ವರ್ಷದಲ್ಲಿ ತಿದ್ದುಪಡಿ ತರುವ ಮೂಲಕ ವಾರ್ಡ್ ಸಭೆಗಳನ್ನು ಅಸ್ತಿತ್ವಕ್ಕೆ ತರಲಾಗಿದೆ?

ಅ) 1999

ಆ) 2000

ಇ) 2002

ಈ) 2006

2002

ಕರ್ನಾಟಕ ಪಂಚಾಯತ್ ರಾಜ್ ಕಾಯಿದೆಗೆ 2002ರಲ್ಲಿ ತಿದ್ದುಪಡಿ ತರುವ ಮೂಲಕ ವಾರ್ಡ್ ಸಭೆಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.

89. ಗ್ರಾಮ ಪಂಚಾಯತಿಯಲ್ಲಿ ಆಯವ್ಯಯ (ಬಜೆಟ್) ಮಂಡನೆ ಕುರಿತಾದ ವಿವರಣೆಯನ್ನು ಈ ಪ್ರಕರಣದಡಿ ನೀಡಲಾಗಿದೆ ____?

ಅ) ಪಕ್ರರಣ 240

ಆ) ಪ್ರಕರಣ -241

ಇ) ಪ್ರಕರಣ-244

ಈ) ಪ್ರಕರಣ-245

ಪ್ರಕರಣ 241

ಈ ಪಕ್ರರಣದಡಿ ಆರ್ಥಿಕ ವರ್ಷದ ಆಯವ್ಯಯವನ್ನು ಫೆಬ್ರುವರಿ 1ನೇ ದಿನದಿಂದ ಮಾರ್ಚ್ 10ನೇ ದಿನಾಂಕದೊಳಗೆ ಮಂಡಿಸಿ ಅಂಗೀಕರಿಸಿ ತಾಲ್ಲೂಕು ಪಂಚಾಯತ್ ಗೆ ಮಾಹಿತಿ ಕಳುಹಿಸಬೇಕಾಗಿರುತ್ತದೆ.

90. ಈ ಕೆಳಗಿನ ಯಾವುವು ಲೆಕ್ಕಪರಿಶೋಧನಾ ವರದಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕಾದ ಪ್ರಾಧಿಕಾರಗಳಾಗಿವೆ?

ಅ) ಗ್ರಾಮ ಪಂಚಾಯತಿ

ಆ) ಗ್ರಾಮ ಪಂಚಾಯತ್ ಲೆಕ್ಕ ಪರಿಶೋಧನಾ ಸಮಿತಿ

ಇ) ಕಾರ್ಯನಿರ್ವಾಹಕ ಅಧಿಕಾರಿ

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

www.karunaduexams.com

ಲೆಕ್ಕಪರಿಶೋಧನೆ ವರದಿ ಬಂದ ಕೂಡಲೇ ವರದಿಯಲ್ಲಿ ಸೂಚಿಸಿರುವ ಆಕ್ಷೇಪಣೆ ಮತ್ತು ವಸೂಲಾತಿ ಬಗ್ಗೆ ಕಾರ್ಯದರ್ಶಿ/ಪಿಡಿಓ ದಾಖಲಿಸಿಕೊಳ್ಳಬೇಕು.ಆ ನಂತರ ಗ್ರಾಮ ಪಂಚಾಯತ್ ಲೆಕ್ಕ ಪರಿಶೋಧನಾ ಸಮಿತಿ ಮುಂದೆ ವರದಿಯನ್ನು ಮಂಡಿಸಬೇಕು.ಹೀಗೆ ಲೆಕ್ಕ ಪರಿಶೋಧನಾ ಸಮಿತಿ ಪರಾಮರ್ಶಿಸಿದ ವರದಿಯನ್ನು ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸುವುದು.ಇಲ್ಲಿ ಗಮನಿಸಿ ಒಂದು ವೇಳೆ ಯಾವುದೇ ಹಣ ಕಾನೂನು ಬಾಹಿರವಾಗಿದೆಯೆಂದು ಕಾರ್ಯನಿರ್ವಾಹಕ ಅಧಿಕಾರಿ ಅಭಿಪ್ರಾಯಪಟ್ಟರೆ ಆಂತಹ ವ್ಯಕ್ತಿಯ ಮೇಲೆ ಋಣಭಾರ ಹೊರಿಸಬಹುದು.ಶೇ.15 ರಂತೆ ಬಡ್ಡಿ ಸಹಿತ ಬಾಕಿ ಮೊಬಲಗಿನೊಂದಿಗೆ ಗ್ರಾ.ಪಂ ಪಾವತಿಸಲು ಸೂಚಿಸಬಹುದು.

91. ಗ್ರಾಮ ಪಂಚಾಯತಿಗಳ ಲೆಕ್ಕ ಪರಿಶೋಧನಾ ವರದಿಗಳ ಆಕ್ಷೇಪಣೆ ತೀರುವಳಿ ಸಂಬಂಧ ರಚಿಸಲಾಗುವು "ಆಡ್ ಹಾಕ್" ಸಮಿತಿಯ ಅಧ್ಯಕ್ಷರು ಯಾರಾಗಿರುತ್ತಾರೆ?

ಅ) ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಆ) ಮುಖ್ಯ ಲೆಕ್ಕಾಧಿಕಾರಿ

ಇ) ಕಾರ್ಯನಿರ್ವಾಹಕ ಅಧಿಕಾರಿ

ಈ) ಮುಖ್ಯ ಯೋಜನಾಧಿಕಾರಿ

ಕಾರ್ಯನಿರ್ವಾಹಕ ಅಧಿಕಾರಿ

ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡು ಬರುವ ದೋಷಗಳನ್ನು ಕಾಲಕಾಲಕ್ಕೆ ಸರಿಪಡಿಸಿಕೊಳ್ಳುವ ಸಲುವಾಗಿ "ಆಡ್ ಹಾಕ್"ಸಮಿತಿಗಳನ್ನು ರಚಿಸಬೇಕಿರುತ್ತದೆ.ಅಂದರೆ ಈ ಸಮಿತಿಯಲ್ಲಿ ಆಕ್ಷೇಪಣೆ ಮತ್ತು ವಸೂಲಾತಿ ಸೂಚಿಸಿರುವ ಮೊತ್ತಗಳಿಗೆ ಬಿಲ್ ವೋಚರ್ ಅಥವಾ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಿ ಅಂತಹ ಆಕ್ಷೇಪಣೆ/ವಸೂಲಾತಿಗಳನ್ನು ವರದಿಯಿಂದ ಕೈಬಿಡಬಹುದು.ಇಂತಹ ಆಡ್ ಹಾಕ್ ಸಮಿತಿಗೆ ಕಾರ್ಯನಿರ್ವಾಹಕ ಅಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಲೆಕ್ಕ ಪರಿಶೋಧನಾ ಇಲಾಖೆಯ ಪ್ರತಿನಿಧಿ, ಲೆಕ್ಕಾಧಿಕಾರಿಗಳು, ಜಿಲ್ಲಾಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ನಿಯೋಜಿಸಿದ ಒಬ್ಬ ತಾಲ್ಲೂಕ್ ಮಟ್ಟದ ಅಧಿಕಾರಿ ಇದರ ಸದಸ್ಯರಾಗಿರುತ್ತಾರೆ.

92. ಈ ಕೆಳಗಿನ ಯಾವ ಸಮಿತಿ ಮತ್ತು ಅವು ರಚನೆಯಾದ ವರ್ಷ ಸರಿಯಾಗಿ ಹೊಂದಾಣಿಕೆಯಾಗಿಲ್ಲ?

ಅ) ಬಲವಂತರಾಯ್ ಮೆಹ್ತಾ ಸಮಿತಿ - 1957

ಆ) ಅಶೋಕ್ ಮೆಹ್ತಾ ಸಮಿತಿ - 1977

ಇ) ಜಿ ವಿ ಕೆ ರಾವ್ ಸಮಿತಿ - 1983

ಈ) ಎಲ್ ಎಂ ಸಿಂಘ್ವಿ ಸಮಿತಿ – 1986

ಜಿ ವಿ ಕೆ ರಾವ್ ಸಮಿತಿ - 1983

ಮೇಲಿನ ಎಲ್ಲವು ದೇಶದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಬಲಗೊಳಿಸಲು ಸರ್ಕಾರ ರಚಸಿದ್ದ ಸಮಿತಿಗಳಾಗಿವೆ.ಬಲವಂತರಾಯ್ ಸಮಿತಿಯನ್ನು 1957 ರಲ್ಲಿ ರಚಿಸಲಾಗಿತ್ತು (ಬಲವಂತರಾಯ್ ಗುಜರಾತ್ನ ಮಾಜಿ ಮುಖ್ಯಮಂತ್ರಿಗಳು).ಈ ಸಮಿತಿ ಶಿಫಾರಸ್ಸುಗಳು 1ನೇ ಏಪ್ರಿಲ್ 1958 ರಿಂದ ಜಾರಿಗೆ ಬರುವ ಮೂಲಕ ಮೂರು ಹಂತದ ಪಂಚಾಯತ್ ರಾಜ್ಯ ವ್ಯವಸ್ಥೆ ಜಾರಿಗೆ ಬಂತು.2ನೇಅಕ್ಟೋಬರ್ 1959 ರಂದುರಾಜಸ್ಥಾನದ ನಾಗೋರ್ ನಲ್ಲಿ ದೇಶದ ಮೊದಲ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಂತು.ಆದ್ದರಿಂದ ರಾಜಸ್ಥಾನ ಬಲವಂತ್ ರಾಯ್ ಸಮಿತಿ ಶಿಫಾರಸುಗಳನ್ನುಕಾರ್ಯಗತಗೊಳಿಸಿದಪ್ರಥಮರಾಜ್ಯವಾಗಿದೆ.1977 ರಲ್ಲಿ ಅಂದಿನ ಮೊರಾರ್ಜಿ ದೇಸಾಯಿ ಪ್ರಧಾನಿ ಅವಧಿಯಲ್ಲಿ ಅಶೋಕ್ ಮೆಹ್ತಾ ಸಮಿತಿಯನ್ನು ರಚಿಸಲಾಗಿತ್ತು.ಈ ಸಮಿತಿ ಎರಡು ಹಂತದ ಪಂಚಾಯತ್ ರಾಜ್ ವ್ಯವಸ್ಥೆ (ಮಂಡಲ ಪಂಚಾಯತ್, ಜಿಲ್ಲಾ ಪರಿಷತ್) ಜಾರಿಗೆ ತರಲು ಶಿಫಾರಸ್ಸು ಮಾಡಿತ್ತು.ಆದರೆ ಸರ್ಕಾರ ಪತನವಾದ ಕಾರಣ ಈ ಸಮಿತಿಯ ಶಿಫಾರಸ್ಸುಗಳು ಅನುಷ್ಠಾನಗೊಳ್ಳಲಿಲ್ಲ. ಕೇವಲ ಪಶ್ಚಿಮ ಬಂಗಾಳ ಮತ್ತು ಕರ್ನಾಟಕ (ರಾಮಕೃಷ್ಣ ಹೆಗ್ಗಡೆ ಮುಖ್ಯಮಂತ್ರಿ) ಮಾತ್ರ ಅಳವಡಿಸಿಕೊಂಡವು.1985 ರಲ್ಲಿ, .ಜಿ.ವಿ.ಕೆರಾವ್ಸಮಿತಿಮತ್ತು 1986 ರಲ್ಲಿಡಾಎಲ್.ಎಂ. ಸಿಂಘ್ವಿಸಮಿತಿಗಳುರಚನೆಗೊಂಡವು.

93. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿ ನಡೆಯುವ ಸ್ಥಳದಲ್ಲಿ ಕಾರ್ಮಿಕರಿಗೆ ಈ ಕೆಳಕಂಡ ಯಾವ ಸೌಲಭ್ಯವನ್ನು ಒದಗಿಸಲಾಗುತ್ತದೆ?

1. ಕುಡಿಯುವ ನೀರು
2. ಲಘು ಉಪಾಹಾರ
3. ಪ್ರಥಮ ಚಿಕಿತ್ಸೆ ಪೆಟ್ಟಿಗೆ
4. 6 ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳನ್ನು ನೋಡಿಕೊಳ್ಳಲು ಅಂಗನವಾಡಿ ಕಾರ್ಯಕರ್ತೆ
5. ವಿಶ್ರಾಂತಿ ಸಮಯಕ್ಕೆ ನರಳಿನ ವ್ಯವಸ್ಥೆ

ಉತ್ತರಗಳು:

ಅ. 1, 2, 4

**ಆ. 1, 3, 5**

ಇ. 2, 3, 4

ಈ. ಮೇಲಿನ ಎಲ್ಲವೂ

www.karunaduexams.com

94. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅರಣ್ಯೀಕರಣ ಮತ್ತು ಗ್ರಾಮೀಣ ರಸ್ತೆ ಕಾಮಗಾರಿಗಳಿಗೆ ಕ್ರಮವಾಗಿ ನಿಗದಿಪಡಿಸಿರುವ ಶೇಕಡಾವಾರು ಮೊತ್ತ ಎಷ್ಟು?

ಅ) ಗರಿಷ್ಟ ಶೇ.20 ಮತ್ತು ಗರಿಷ್ಟ ಶೇ.10

ಆ) ಕನಿಷ್ಟ ಶೇ.10 ಮತ್ತು ಗರಿಷ್ಟ ಶೇ.20

ಇ) ಕನಿಷ್ಟ ಶೇ.20 ಮತ್ತು ಕನಿಷ್ಟ ಶೇ.20

ಈ)ಕನಿಷ್ಟ ಶೇ. 20 ಮತ್ತು ಗರಿಷ್ಟ ಶೇ.10

ಕನಿಷ್ಟ ಶೇ. 20 ಮತ್ತು ಗರಿಷ್ಟ ಶೇ.10

95. ಗ್ರಾಮ ಪಂಚಾಯಿತಿಯ ಅನುದಾನದಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ.ಜಾತಿ ಮತ್ತು ಪ. ಪಂಗಡಕ್ಕೆ ಸೇರಿದ ಸಮುದಾಯದ ಅಭ್ಯುದಯಕ್ಕೆ, ವಿಕಲಚೇತನರಿಗೆ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು ಕ್ರಮವಾಗಿ ಎಷ್ಟು ಶೇಕಡವಾರು ಮೊತ್ತವನ್ನು ಮೀಸಲಿಡಬೇಕು?

ಅ) ಶೇ. 18, 5 ಮತ್ತು 1

ಆ) ಶೇ. 20, 5 ಮತ್ತು 1

ಇ) ಶೇ. 50, 3 ಮತ್ತು 1

ಈ) ಶೇ. 25, 3 ಮತ್ತು 1

ಶೇ. 25, 3 ಮತ್ತು 1

96. ಗ್ರಾಮ ಪಂಚಾಯಿತಿಗಳಲ್ಲಿ ಸದ್ಯ (2016-17 ನೇ ಸಾಲಿನಲ್ಲಿ) ಚಾಲ್ತಿಯಲ್ಲಿರದ ಯೋಜನೆಗಳು ಯಾವುವು?

1. ಬಸವ ವಸತಿ ಯೋಜನೆ
2. ಆಶ್ರಯ ವಸತಿ ಯೋಜನೆ
3. ಇಂದಿರಾ ಆವಾಸ್ ಯೋಜನೆ
4. ಪ್ರಧಾನ ಮಂತ್ರಿ ಆವಾಸ್ ಯೋಜನೆ
5. ಸಂಜೀವಿನಿ ಯೋಜನೆ

ಉತ್ತರಗಳು:

ಅ. 4 ಮತ್ತು 5

ಆ. 1 ಮತ್ತು 5

**ಇ. 2 ಮತ್ತು 3**

ಈ. 2 ಮತ್ತು 4

www.karunaduexams.com

97. ಗ್ರಾಮ ಪಂಚಾಯಿತಿಗಳಲ್ಲಿ ಜಮಾಬಂದಿ ಕುರಿತಾದ ಕೆಳಕಂಡ ಹೇಳಿಕೆಗಳನ್ನು ಗಮನಿಸಿ:

1. ಎಲ್ಲಾ ಗ್ರಾಮ ಪಂಚಾಯಿತಿಗೆ ಜಮಾಬಂದಿಯನ್ನು ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಕೈಗೊಳ್ಳುವರು
2. ಜಮಾಬಂದಿ ಕೈಗೊಳ್ಳಲು ಸಭೆಯ 2/3 ರಷ್ಟು ಕೋರಂ ಅಗತ್ಯ
3. ಗ್ರಾಮ ಪಂಚಾಯಿತಿಗಳಿಗಿರುವಂತೆ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೂ ಜಮಾಬಂದಿ ಇದೆ

ಉತ್ತರಗಳು:

ಅ. 1 ಮತ್ತು 3 ಸರಿಯಾಗಿದೆ

ಆ. 1 ಮತ್ತು 2 ಸರಿಯಾಗಿದೆ

ಇ. ಮೇಲಿನ ಎಲ್ಲವೂ ಸರಿಯಾಗಿದೆ

**ಈ. ಮೇಲಿನ ಎಲ್ಲವೂ ತಪ್ಪಾಗಿದೆ**

98. “ಸಫಾಯಿ ಕರ್ಮಚಾರಿ” ಎಂದರೆ ______?

ಅ) ಚರಂಡಿಯನ್ನು ಸ್ವಚ್ಛ ಮಾಡುವವ

ಆ)ದೈಹಿಕವಾಗಿ ಮನುಷ್ಯರ ಮಲವನ್ನು ಹೊರುವವ/ಸ್ವಚ್ಛಗೊಳಿಸುವವ

ಇ) ಚರ್ಮ ಕೆಲಸ ಮಾಡುವವ

ಈ) ಕಲ್ಲು ಗಣಿಯಲ್ಲಿ ಕೆಲಸ ಮಾಡುವವ

ದೈಹಿಕವಾಗಿ ಮನುಷ್ಯರ ಮಲವನ್ನು ಹೊರುವವ/ಸ್ವಚ್ಛಗೊಳಿಸುವವ

99. ಕರ್ನಾಟಕದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM)ವನ್ನು ಯಾವ ಹೆಸರಿನಡಿ ಅನುಷ್ಠಾನಗೊಳಿಸಲಾಗುತ್ತಿದೆ?

ಅ) ಸ್ತ್ರೀಶಕ್ತಿ

ಆ) ಸಂಜೀವಿನಿ

ಇ) ರಾಜೀವ್ ಚೈತನ್ಯ ಯೋಜನೆ

ಈ) ದುಡಿಮೆ-ಹಿರಿಮೆ

ಸಂಜೀವಿನಿ

www.karunaduexams.com

100. ತಪ್ಪಾಗಿ ಹೊಂದಾಣಿಕೆಯಾಗಿರುವುದನ್ನು ಗುರುತಿಸಿ:

ಅ) ಗ್ರಾಮಸಭೆ – ಪ್ರಕರಣ 3ಇ

ಆ) ಗ್ರಾಮಸಭೆಯ ಕರ್ತವ್ಯಗಳು – ಪ್ರಕರಣ 3ಎಫ್

ಇ) ಗ್ರಾಮಸಭಾದ ಸಭೆಗಳು – 3ಜಿ

ಈ) ಗ್ರಾಮ ಸಭಾದ ವಿಶೇಷ ಸಭೆ – 3ಐ

ಗ್ರಾಮ ಸಭಾದ ವಿಶೇಷ ಸಭೆ – 3ಐ

www.karunaduexams.com